ಸಂಪುಟ 01 | ಸಂಚಿಕೆ 177 ಮಂಗಳವಾರ 01 ಸೆಪ್ಟೆಂಬರ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರು,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1)ರಾಷ್ಟ್ರೀಯ ಪೌಷ್ಟಿಕಾಂಶ ವಾರ (National Nutrition Week) ಭಾರತದಲ್ಲಿ ಸೆಪ್ಟೆಂಬರ್ 1ರಿಂದ 7ರವರೆಗೆ ರಾಷ್ಟ್ರೀಯ ಪೌಷ್ಟಿಕಾಂಶ ವಾರ ಆಚರಿಸಲಾಗುತ್ತದೆ. ಸಮತೋಲಿತ ಆಹಾರ, ಆರೋಗ್ಯಕರ ಜೀವನಶೈಲಿ ಮತ್ತು ಪೌಷ್ಟಿಕಾಂಶದ ಮಹತ್ವದ ಕುರಿತು ಜನರಲ್ಲಿ ಜಾಗೃತಿ ಮೂಡಿಸುವುದು ಇದರ ಉದ್ದೇಶ.

2)ರಾಷ್ಟ್ರೀಯ ಪತ್ರ ದಿನ (National Letter Writing Day) ಪತ್ರ ಬರೆಯುವ ಹಳೆಯ ಹಾಗೂ ಅರ್ಥಪೂರ್ಣ ಸಂವಹನದ ಪರಂಪರೆಯನ್ನು ನೆನಪಿಸುವ ದಿನವಾಗಿ ಕೆಲವು ದೇಶಗಳಲ್ಲಿ ಸೆಪ್ಟೆಂಬರ್ 1ರಂದು ಆಚರಿಸಲಾಗುತ್ತದೆ.

## ಸುಭಾಷಿತ

ಸಂಸ್ಕೃತಿಯೆಂದರೆ ಮನುಷ್ಯರ ಅನ್ನೋನ್ಯ
ಸಂಬಂಧಗಳಲ್ಲಿ ನಯವಿನಯಗಳ
ಸೊಬಗು, ಸ್ವಗುಣ ಪರಗುಣಗಳ
ಸಮ್ಮಿಶ್ರಿತ ಕಾಂತಿ.

ಡಿ.ವಿ. ಗುಂಡಪ್ಪ

# ಜನರ ಮನೆ ಬಾಗಿಲಿಗೆ ಆಡಳಿತ : ಸೆ.5ರಂದು ಪ್ರಜಾಸೇವಾ ಅಭಿಯಾನಕ್ಕೆ ಚಾಲನೆ

❑ ನೈಜ್ಯ ದೇಸೆ ನ್ಯೂಸ್

**ಬೆಂಗಳೂರು, ಆ.31– ಸರ್ಕಾರಿ ಕಚೇರಿಗಳಿಗೆ ಅಲೆದಾಡದೆ ತಮ್ಮ ಸಮಸ್ಯೆಗಳಿಗೆ ಪರಿಹಾರ ಪಡೆಯಲು ಸಾರ್ವಜನಿಕರಿಗೆ ಅನುಕೂಲವಾಗುವಂತೆ ರಾಜ್ಯ ಸರ್ಕಾರ 'ಪ್ರಜಾಸೇವಾ ಅಭಿಯಾನ' ಆರಂಭಿಸುತ್ತಿದೆ. ಆಡಳಿತವನ್ನು ಜನರ ಬಳಿಗೆ ಕೊಂಡೊಯ್ಯುವ ಉದ್ದೇಶದ ಈ ಅಭಿಯಾನಕ್ಕೆ ಸೆ.5ರಂದು ವಿಜಯನಗರ ಜಿಲ್ಲೆಯ ಕೂಡ್ಲಿಗಿ ಹೋಬಳಿಯಲ್ಲಿ ಚಾಲನೆ ದೊರೆಯಲಿದೆ ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ತಿಳಿಸಿದ್ದಾರೆ.**

ಸರ್ಕಾರದ ವಿವಿಧ ಇಲಾಖೆಗಳ ಸೇವೆಗಳಿಗೆ ಸಂಬಂಧಿಸಿದ ಕುಂದುಕೊರತೆ, ಅರ್ಜಿ ಹಾಗೂ ದೂರುಗಳನ್ನು ನೇರವಾಗಿ ಸ್ವೀಕರಿಸಿ, ಸಾಧ್ಯವಾದಷ್ಟು ಸ್ಥಳದಲ್ಲಿಯೇ ಪರಿಹರಿಸುವುದು ಅಭಿಯಾನದ ಪ್ರಮುಖ ಉದ್ದೇಶವಾಗಿದೆ. ಹೆಚ್ಚಿನ ಸಮಯ ಬೇಕಾಗುವ ಸಮಸ್ಯೆಗಳನ್ನು ನಿಗದಿತ ಅವಧಿಯಲ್ಲಿ ವಿಲೇವಾರಿ ಮಾಡುವ ಮೂಲಕ ಅಧಿಕಾರಿಗಳ ಹೊಣೆಗಾರಿಕೆಯನ್ನು ಹೆಚ್ಚಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಸಣ್ಣಪುಟ್ಟ ಕೆಲಸಗಳಿಗೂ ತಾಲೂಕು ಕಚೇರಿ, ಗ್ರಾಮ ಪಂಚಾಯಿತಿ ಸೇರಿದಂತೆ ವಿವಿಧ ಸರ್ಕಾರಿ ಕಚೇರಿಗಳಿಗೆ ಪದೇಪದೆ ಅಲೆದಾಡಬೇಕಾದ ಪರಿಸ್ಥಿತಿಯನ್ನು ತಪ್ಪಿಸಿ, ಆಡಳಿತವನ್ನು ಜನರ ಮನೆ ಬಾಗಿಲಿಗೆ ತಲುಪಿಸುವುದು ಅಭಿಯಾನದ ಆಶಯವಾಗಿದೆ. ಸಾರ್ವಜನಿಕರ ಅಹವಾಲುಗಳನ್ನು ಆಲಿಸುವುದರ ಜತೆಗೆ ಸರ್ಕಾರದ ವಿವಿಧ ಯೋಜನೆಗಳ ಕುರಿತು ಮಾಹಿತಿ ನೀಡಲು ಸಭೆಗಳಲ್ಲಿ ಇಲಾಖಾವಾರು ಮಳಿಗೆಗಳನ್ನು ಸ್ಥಾಪಿಸಲಾಗುತ್ತದೆ.

ಪ್ರತಿ ಶನಿವಾರ ಸಭೆ ಪ್ರತಿ ಶನಿವಾರ ತಾಲೂಕು ಅಥವಾ ಹೋಬಳಿ ಮಟ್ಟದಲ್ಲಿ ಪ್ರಜಾಸೇವಾ ಅಭಿಯಾನ ಸಭೆಗಳನ್ನು ಆಯೋಜಿಸಲಾಗುತ್ತದೆ. ತಿಂಗಳ ಮೊದಲ ಮತ್ತು ಮೂರನೇ ಶನಿವಾರ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ತಾಲೂಕು ಕೇಂದ್ರದಲ್ಲಿ ಸಭೆ ನಡೆಯಲಿದೆ. ಎರಡನೇ ಮತ್ತು ನಾಲ್ಕನೇ ಶನಿವಾರ ಸ್ಥಳೀಯ ಶಾಸಕರ ಅಧ್ಯಕ್ಷತೆಯಲ್ಲಿ ತಾಲೂಕು



ಅಥವಾ ಹೋಬಳಿ ಮಟ್ಟದಲ್ಲಿ ಸಭೆ ನಡೆಸಲಾಗುತ್ತದೆ.

ಮುಂದಿನ ಮೂರು–ನಾಲ್ಕು ತಿಂಗಳಲ್ಲಿ ರಾಜ್ಯದ ಎಲ್ಲ ತಾಲೂಕು ಹಾಗೂ ಹೋಬಳಿಗಳಲ್ಲಿ ಸಭೆ ನಡೆಸಲು ಏಕೀಕೃತ ವೇಳಾಪಟ್ಟಿ ಸಿದ್ಧಪಡಿಸಲಾಗುತ್ತದೆ. ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ತಾಲೂಕು ಮಟ್ಟದ ಸಭೆ ನಡೆಯುವ ದಿನವೇ ಅದೇ ಕ್ಷೇತ್ರದಲ್ಲಿ ಪ್ರತ್ಯೇಕ ಶಾಸಕರ ಸಭೆ ನಡೆಸುವುದಿಲ್ಲ. ಸಂಬಂಧಿಸಿದ ಶಾಸಕರು ಸಚಿವರ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಸಭೆಯ ಕುರಿತು ಸಾರ್ವಜನಿಕರಿಗೆ ಕನಿಷ್ಠ 15 ದಿನಗಳ ಮುಂಚಿತವಾಗಿ ಮನೆ–ಮನೆಗೆ ಕರಪತ್ರ ವಿತರಿಸಿ ಮಾಹಿತಿ ನೀಡಲಾಗುತ್ತದೆ. ಕರಪತ್ರದಲ್ಲಿಯೇ ಅರ್ಜಿ ನಮೂನೆ ಹಾಗೂ ಅಗತ್ಯ ದಾಖಲೆಗಳ ವಿವರ ನೀಡಲಾಗುತ್ತದೆ. ಕೃತಕ ಬುದ್ಧಿಮತ್ತೆ ಆಧಾರಿತ ಕರೆ ವ್ಯವಸ್ಥೆಯ ಮೂಲಕ ಸಭೆಯ ದಿನಾಂಕ, ಸಮಯ, ಸ್ಥಳ ಹಾಗೂ ಅಧ್ಯಕ್ಷತೆ ವಹಿಸುವ ಜನಪ್ರತಿನಿಧಿಗಳ ಕುರಿತು ಮುಂಗಡ ಮಾಹಿತಿ ನೀಡಲಾಗುತ್ತದೆ.

1902ಕ್ಕೆ ದೂರು ಸಲ್ಲಿಕೆ ರಾಜ್ಯದ ವಿವಿಧ ಇಲಾಖೆಗಳ ಸೇವೆ ಹಾಗೂ ಯೋಜನೆಗಳಿಗೆ ಸಂಬಂಧಿಸಿದ ದೂರುಗಳನ್ನು ದಾಖಲಿಸಲು ಏಕೀಕೃತ ಸಾರ್ವಜನಿಕ ಕುಂದುಕೊರತೆ ನಿವಾರಣಾ ವ್ಯವಸ್ಥೆ ರೂಪಿಸಲಾಗಿದೆ. ಸಾರ್ವಜನಿಕರು 1902 ಸಹಾಯವಾಣಿ ಅಥವಾ ಸರ್ಕಾರದ ದೂರು ನಿವಾರಣಾ ಪೋರ್ಟಲ್ ಮೂಲಕ ತಮ್ಮ ಸಮಸ್ಯೆಗಳನ್ನು ದಾಖಲಿಸಬಹುದು. ಸಭೆಗಳಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಜರಿದ್ದು, ಸರ್ಕಾರದ ಯೋಜನೆಗಳ ಅರ್ಹತೆ, ಸೌಲಭ್ಯ ಹಾಗೂ ಅರ್ಜಿ ಸಲ್ಲಿಸುವ ವಿಧಾನ ಕುರಿತು ಜನರಿಗೆ ಮಾಹಿತಿ ನೀಡಲಿದ್ದಾರೆ. ಉತ್ತಮ ಕಾರ್ಯಪದ್ಧತಿಗಳ ಪ್ರದರ್ಶನದ ಜತೆಗೆ ಕುಡಿಯುವ ನೀರು ಹಾಗೂ ಮೂಲಭೂತ ವೈದ್ಯಕೀಯ ಸೌಲಭ್ಯಗಳನ್ನೂ ಒದಗಿಸಲಾಗುತ್ತದೆ.

ಪ್ರತಿ ಸಭೆಯ ಬಳಿಕ ಸ್ವೀಕರಿಸಿದ ಅಹವಾಲುಗಳು, ಕೈಗೊಂಡ ಕ್ರಮ, ಪರಿಹಾರದ ವಿವರ, ಛಾಯಾಚಿತ್ರ ಹಾಗೂ ವಿಡಿಯೋಗಳನ್ನು ಪೋರ್ಟಲ್‌ನಲ್ಲಿ ದಾಖಲಿಸಲಾಗುತ್ತದೆ. ಬಾಕಿ ಉಳಿದ ಸಮಸ್ಯೆಗಳ ಕುರಿತು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮೇಲ್ವಿಚಾರಣೆ ನಡೆಸಲಿದ್ದಾರೆ. ಪ್ರತಿ ಬುಧವಾರ ಮೂರು ಹಂತದ ಪರಿಶೀಲನೆ ಅಭಿಯಾನದಡಿ ಸ್ವೀಕರಿಸುವ ಅರ್ಜಿ ಹಾಗೂ ಅಹವಾಲುಗಳ ಮೇಲೆ ಪ್ರತಿ ಬುಧವಾರ ಮೂರು ಹಂತಗಳಲ್ಲಿ ಪರಿಶೀಲನೆ ನಡೆಯಲಿದೆ.

ಬೆಳಗ್ಗೆ 9ರಿಂದ 11ರವರೆಗೆ: ತಾಲೂಕು ಮಟ್ಟದ ಪರಿಶೀಲನೆ ನಡೆಯಲಿದ್ದು, ತಹಶೀಲ್ದಾರ್ ಹಾಗೂ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಹಂತದಲ್ಲಿ ಬಗೆಹರಿಯದ ಸಮಸ್ಯೆಗಳನ್ನು ಉಪವಿಭಾಗಾಧಿಕಾರಿಗಳಿಗೆ ಸಲ್ಲಿಸಲಿದ್ದಾರೆ.

ಬೆಳಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ: ಉಪವಿಭಾಗ ಮಟ್ಟದ ಪರಿಶೀಲನೆ ನಡೆಯಲಿದೆ. ಸಹಾಯಕ ಆಯುಕ್ತರು ತಾಲೂಕು ಮಟ್ಟದಿಂದ ಬಂದ ಪ್ರಕರಣಗಳನ್ನು ಪರಿಶೀಲಿಸಿ, ತಮ್ಮ ಹಂತದಲ್ಲಿ ಬಗೆಹರಿಯದ ಸಮಸ್ಯೆಗಳನ್ನು ಜಿಲ್ಲಾಧಿಕಾರಿಗಳಿಗೆ ಕಳುಹಿಸಲಿದ್ದಾರೆ. ಮಧ್ಯಾಹ್ನ 3ರಿಂದ ಸಂಜೆ 5ರವರೆಗೆ: ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಜಿಲ್ಲಾ ಮಟ್ಟದ ಪರಿಶೀಲನೆ ನಡೆಯಲಿದೆ.

ನಿಗದಿತ ಅವಧಿಯಲ್ಲಿ ಬಗೆಹರಿಯದ ಅರ್ಜಿಗಳನ್ನು ಸಂಬಂಧಿಸಿದ ಇಲಾಖೆಯ ಉನ್ನತ ಅಧಿಕಾರಿಗಳಿಗೆ ಸ್ವಯಂಚಾಲಿತವಾಗಿ ಮೇಲ್ದರ್ಜೆಗೆ ವರ್ಗಾಯಿಸುವ ವ್ಯವಸ್ಥೆಯೂ ಇರಲಿದೆ. ಪರಿಹಾರದ ಬಗ್ಗೆ ಸಾರ್ವಜನಿಕರಿಗೆ ಅಸಮಾಧಾನವಿದ್ದರೆ, ಸಂಬಂಧಿಸಿದ ಅಧಿಕಾರಿಯ ಮುಂದೆ ಖುದ್ದಾಗಿ ಹಾಜರಾಗಿ ತಮ್ಮ ಅಹವಾಲು ಮಂಡಿಸಲು ಅವಕಾಶ ಕಲ್ಪಿಸಲಾಗುತ್ತದೆ. ಗ್ರಾಮ ಒನ್‌ನಲ್ಲಿಯೇ ಅರ್ಜಿ ಸಾರ್ವಜನಿಕರು ತಮ್ಮ ಅರ್ಜಿ ಹಾಗೂ ಅಹವಾಲುಗಳನ್ನು ಮುಂಚಿತವಾಗಿಯೇ ಗ್ರಾಮ ಒನ್ ಕೇಂದ್ರಗಳಲ್ಲಿ ಸಲ್ಲಿಸಬಹುದು. ಸಭೆ ನಡೆಯುವ ಸ್ಥಳದಲ್ಲಿಯೂ ಗ್ರಾಮ ಒನ್ ಮಳಿಗೆಗಳನ್ನು ಸ್ಥಾಪಿಸಿ ಕಂಪ್ಯೂಟರ್, ಮುದ್ರಕ ಹಾಗೂ ಅಂತರ್ಜಾಲ ಸೌಲಭ್ಯ ಒದಗಿಸಲಾಗುತ್ತದೆ. ಇದರಿಂದ ಸ್ಥಳದಲ್ಲಿಯೇ ಆನ್‌ಲೈನ್ ಮೂಲಕ ಅರ್ಜಿ ಹಾಗೂ ದೂರು ಸಲ್ಲಿಸಲು ಅವಕಾಶ ದೊರೆಯಲಿದೆ.

ಸಭೆಯಲ್ಲಿ ಎರಡು ರೀತಿಯ ಅಹವಾಲುಗಳನ್ನು ಪ್ರತ್ಯೇಕವಾಗಿ ಪರಿಗಣಿಸಲಾಗುತ್ತದೆ. ಮೊದಲನೆಯದು ಹೊಸದಾಗಿ ಸಲ್ಲಿಸುವ ದೂರುಗಳು. ಎರಡನೆಯದು ಈಗಾಗಲೇ ಸಕಾಲ ಅಥವಾ ಏಕೀಕೃತ ಸಾರ್ವಜನಿಕ ಕುಂದುಕೊರತೆ ನಿವಾರಣಾ ವ್ಯವಸ್ಥೆಯಲ್ಲಿ ನೋಂದಾಯಿಸಿದ್ದರೂ ಪರಿಹಾರವಾಗದ ಅಥವಾ 21 ದಿನಗಳ ಬಳಿಕವೂ ಸಮರ್ಪಕ ಪರಿಹಾರ ದೊರೆಯದ ಅಹವಾಲುಗಳು. ಇಂತಹ ಪ್ರಕರಣಗಳಿಗೆ ಆದ್ಯತೆ ನೀಡಲಾಗುತ್ತದೆ.

ಸ್ಥಳದಲ್ಲಿಯೇ ಮಂಜೂರಾತಿ ಪತ್ರ ಅರ್ಹ ಫಲಾನುಭವಿಗಳಿಗೆ ವಿವಿಧ ಸರ್ಕಾರಿ ಯೋಜನೆಗಳ ಮಂಜೂರಾತಿ ಪತ್ರಗಳನ್ನು ಸ್ಥಳದಲ್ಲಿಯೇ ವಿತರಿಸುವ ವ್ಯವಸ್ಥೆ ಇರಲಿದೆ. ಈಗಾಗಲೇ ಪರಿಹಾರಗೊಂಡ ಪ್ರಕರಣಗಳಿಗೆ ಸಂಬಂಧಿಸಿದ ಅನುಮೋದನೆ ಅಥವಾ ದೃಢೀಕರಣ ಪತ್ರವನ್ನೂ ಸ್ಥಳದಲ್ಲಿಯೇ ನೀಡಲಾಗುತ್ತದೆ. ಅರ್ಜಿ ಹಾಗೂ ಅಹವಾಲುಗಳ ಪ್ರಗತಿಯನ್ನು ಸಾರ್ವಜನಿಕರು ನೈಜ ಸಮಯದಲ್ಲಿ ಪರಿಶೀಲಿಸಲು ಅವಕಾಶ ಕಲ್ಪಿಸಲಾಗುತ್ತದೆ. ಈ ಮೂಲಕ ದೂರುಗಳ ತ್ವರಿತ ವಿಲೇವಾರಿ, ಸ್ಥಳದಲ್ಲಿಯೇ ಸೇವೆ, ನಿರಂತರ ಪರಿಶೀಲನೆ ಹಾಗೂ ಅಧಿಕಾರಿಗಳ ಹೊಣೆಗಾರಿಕೆಯನ್ನು ಖಚಿತಪಡಿಸುವ ಗುರಿಯನ್ನು ಪ್ರಜಾಸೇವಾ ಅಭಿಯಾನ ಹೊಂದಿದೆ.

ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದರ ಜತೆಗೆ ಸರ್ಕಾರದ ಯೋಜನೆಗಳ ಮಾಹಿತಿ ಪಡೆದು ಸಲಹೆ–ಸೂಚನೆಗಳನ್ನು ನೀಡಬೇಕು ಎಂದು ಡಾ. ಶಾಲಿನಿ ರಜನೀಶ್ ಮನವಿ ಮಾಡಿದ್ದಾರೆ.

## ಸಂಗಮೇಶ್ವರ ಪ್ರೌಢಶಾಲೆಗೆ ಮಧ್ಯಾಹ್ನ ಬಿಸಿಯೂಟದ ಅಧಿಕಾರಿ ಬೇಟಿ

❑ ನೈಜ್ಯ ದೇಸೆ ನ್ಯೂಸ್

**ತಾಳಿಕೋಟಿ: ಪಟ್ಟಣದ ಶ್ರೀ ಎಸ್.ಎಸ್.ವಿದ್ಯಾಸಂಸ್ಥೆಯ ಅಡಿಯಲ್ಲಿ ನಡೆಯುತ್ತಿರುವ ಶ್ರೀ ಸಂಗಮೇಶ್ವರ ಪ್ರೌಢಶಾಲೆಗೆ ವಿಜಯಪುರ ಜಿಲ್ಲಾ ಪಂಚಾಯತಿಯ ಇಓ ಮಧ್ಯಾಹ್ನ ಬಿಸಿಯೂಟದ ಅಧಿಕಾರಿಗಳಾದ ಶಿವಚಂದ್ರ ಕತ್ನಳ್ಳಿಯವರು ಪ್ರೌಢ ಹಾಗೂ ಪ್ರಾಥಮಿಕ ಶಾಲೆಗೆ ಸೋಮವಾರ ಭೇಟಿ ನೀಡಿದರು.**



ಈ ಸಂದರ್ಭದಲ್ಲಿ ಅವರು ಅಡುಗೆ ಸಹಾಯಕರಿಗೆ ರುಚಿ ಮತ್ತು ಶುಚಿ ಮಧ್ಯಾಹ್ನದ ಬಿಸಿಯೂಟ ತಯಾರಿಸಿ, ಅಡುಗೆ ಕಾರ್ಯ ಮಾಡುವ ಸಮಯದಲ್ಲಿ ನೆಪ್ರಾನ ಕಡ್ಡಾಯವಾಗಿ ದರಿಸಬೇಕು ಎಂದು ಸಲಹೆ ನೀಡಿದರು. ಹಾಗೂ ಪ್ರೌಢಶಾಲೆಯ ಕಾರ್ಯಾಲಯಕ್ಕೆ ಆಗಮಿಸಿ ಸಿಬ್ಬಂದಿಗಳ ಕಾರ್ಯದ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸಿದರು.ಈ ಸಮಯದಲ್ಲಿ ಪ್ರಾಥಮಿಕ ಶಾಲೆಯ ಮುಖ್ಯ ಗುರುಗಳಾದ ಜೆ.ಎಮ್.ಕೊಣ್ಣೂರ, ಪ್ರೌಢಶಾಲೆ ಹಿರಿಯ ಶಿಕ್ಷಕ ಬಿ.ಆಯ್. ಹಿರೇಹೊಳಿ, ಎಸ್.ಸಿ.ಗುಡಗುಂಟಿ, ದೈಹಿಕ ಶಿಕ್ಷಕ ಎಮ್.ಎಸ್. ರಾಯಗೊಂಡ, ಚಿತ್ರಕಲಾ ಶಿಕ್ಷಕ ಯು.ಎಚ್.ಗಟನೂರ ಉಪಸ್ಥಿತರಿದ್ದರು.

## ನಗರದ ಶಾಫಿ ಆಸ್ಪತ್ರೆ ಹಾಗೂ ದಿ.ಸಲೀಂ ಸೌಕಾರ್ ಬಳಗದಿಂದ ಉಚಿತ ಆರೋಗ್ಯ ತಪಾಸಣೆ ಶಿಬಿರ

❑ ನೈಜ್ಯ ದೇಸೆ ನ್ಯೂಸ್

**ಸಿಂಧನೂರು: ನಗರದ ಲಕ್ಷ್ಮಿಕ್ಯಾಂಪಿನ 31ನೇ ವಾರ್ಡಿನಲ್ಲಿರುವ ಉರ್ದು ಶಾಲೆಯಲ್ಲಿ ಆ.29 ಶನಿವಾರದಂದು ನಗರದ ಶಾಫಿ ಆಸ್ಪತ್ರೆ ಹಾಗೂ ದಿವಂಗತ ಕಾಂಗ್ರೆಸ್ ಮುಖಂಡ ಸಲೀಂ ಸೌಕಾರ್ ಬಳಗದ ವತಿಯಿಂದ ಉಚಿತ ಆರೋಗ್ಯ ತಪಾಸಣೆ ಶಿಬಿರ ಏರ್ಪಡಿಸಲಾಗಿತ್ತು.**

ಈ ಶಿಬಿರದಲ್ಲಿ ಡಾ.ಸಯ್ಯದ್ ಫುರ್ಕಾನ್ ಅಲಿ ಎಂಬಿಬಿಎಸ್, ಎಂ.ಡಿಯವರು 110 ರೋಗಿಗಳಿಗೆ ಇಸಿಜಿ, ಸುಗರ್, ಬಿಪಿ, ಸೇರಿದಂತೆ ಇನ್ನಿತರೆ ರೋಗಗಳ ಬಗ್ಗೆ ತಪಾಸಣೆ ನಡೆಸಿ ಉಚಿತ ಚಿಕಿತ್ಸೆ ನೀಡಿದರು. ಹಾಗೂ ಇವರ ತಂದೆಯವರಾದ ಭಾಷುಮಿಯಾ ಅಯೋಧಿ, ಮತ್ತು ಅವರ ಕಿರಿಯ ಮಗ ಇರ್ಫಾನ್ ಅಯೋಧಿ, ಮುಖಂಡರಾದ ಸಯ್ಯದ್ ವಲಿ ಮಿಟ್ಟಿಮನಿ, ವಲಿ ಸಾಬ್ ಮಿಟ್ಟಿಮನಿ, ಡಾ.ಎಂ.ಡಿ.ಶಫಿ, ಮೊಬೈಲ್ ಶಾಪ್ ಶಬ್ಬೀರ್, ಹಾಗೂ ರಾಜು, ಸೇರಿದಂತೆ ವಿದ್ಯಾರ್ಥಿಗಳು ಈ ಉಚಿತ ಆರೋಗ್ಯ ತಪಾಸಣೆಯ ಶಿಬಿರದಲ್ಲಿ ಪಾಲ್ಗೊಂಡಿದ್ದರು.



ನಗರದ ಬಸ್ ನಿಲ್ದಾಣದ ಎದುರಗಡೆಯಿರುವ ಆದರ್ಶ ಕಾಲೋನಿಯ ಸತ್ಕಾರ ಟಿಫಾನಿಸ್ ಹೊಟೇಲ್ ಪಕ್ಕದ ಶಾಫಿ ಆಸ್ಪತ್ರೆಯಲ್ಲಿ ಹಾವು, ಚೇಳು, ಕಡಿತ ವಿಷ ಸೇವನೆ ಎದೆನೋವು, ಹೃದಯಾಘಾತ, ಮೂಲವ್ಯಾಧಿ ಹಾಗೂ ಕಾಮಾಲೆ, ಸೇರಿದಂತೆ ಅನೇಕ ರೋಗಗಳಿಗೆ ವೈದ್ಯರ ಮಾರ್ಗದರ್ಶನದಲ್ಲಿ ಉತ್ತಮ ಚಿಕಿತ್ಸೆಯನ್ನು ನೀಡಿ ಗುಣಪಡಿಸಲಾಗುವುದು ಎಂದ ಡಾ.ಎಂ.ಡಿ.ಶಫಿ ತಿಳಿಸಿದರು.

## ಎಸ್‌ಐಆರ್ ಬಿಟ್ಟು ಹೋದ ಮತದಾರರ ಪಟ್ಟಿ ಪತ್ತೆ ಹಚ್ಚುವ ಮಹತ್ವದ ಕೆಲಸವಾಗಲಿ: ವೈ.ನರೇಂದ್ರನಾಥ

❑ ನೈಜ್ಯ ದೇಸೆ ನ್ಯೂಸ್



**ಸಿಂಧನೂರು: ಎಸ್‌ಐಆರ್ ವಿರುದ್ಧ ಕೇವಲ ಟೀಕೆ ಟಿಪ್ಪಣಿ ಮಾಡುತ್ತಾ ಸಮಯ ಕಳೆಯುವ ಬದಲು, ಕಳಕಳಿಯಿಂದ ಸೇವೆ ಮಾಡಬಯಸುವ ಸಂಘಟನೆಗಳು ಮತ್ತು ವ್ಯಕ್ತಿಗಳು ಅಳಿಸಲಾದ ಮತದಾರರನ್ನು ಬೂತ್ ಮಟ್ಟದಲ್ಲಿ ಪತ್ತೆ ಹಚ್ಚಿ ಪಟ್ಟಿ ಮಾಡುವುದು ಮತ್ತು ಬೂತ್ ಮಟ್ಟದಲ್ಲಿ ತಾರ್ಕಿಕ ವ್ಯತ್ಯಾಸಗಳಿಗಾಗಿ ನೋಟಿಸ್ ಪಡೆದವರನ್ನು ಕಂಡು ಹಿಡಿಯುವುದು ಈಗ ಸದ್ಯ ಮಾಡುವ ಬಹಳ ಮುಖ್ಯವಾದ ಕೆಲಸ ಹಾಗೂ ಇದಕ್ಕೆ ಕಾಲಾವಕಾಶ ಕೂಡ ಇದೆ ಎಂದು ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ತಾಲೂಕು ಅಧ್ಯಕ್ಷ ವೈ.ನರೇಂದ್ರನಾಥ ಹೇಳಿದರು.**

ಸದ್ಯ ಅಸ್ತಿತ್ವದಲ್ಲಿರುವ ಕಾರ್ಯವಿಧಾನವನ್ನು ಅನುಸರಿಸಿ ಮತದಾರರ ಪಟ್ಟಿಯಲ್ಲಿ ಬಿಟ್ಟು ಹೋದವರ ಹೆಸರನ್ನು ಸೇರಿಸುವುದು ಆದ್ಯತೆಯ ಕೆಲಸವಾಗಿರಬೇಕು, ಎಸ್‌ಐಆರ್ ವಿರುದ್ಧ ಹೋರಾಟ ಮಾಡುವವರು ಮತ್ತು ಚರ್ಚಿಸುವವರು ಮೊದಲು ಈ ಕೆಲಸವನ್ನು ಕೈಗೆತ್ತಿಕೊಂಡು ಅಧಿಕಾರಿಗಳಿಗೆ ಸಹಕರಿಸಲಿ, ಸುಪ್ರೀಂ ಕೋರ್ಟ್ ಎಸ್‌ಐಆರ್ ಅನಿವಾರ್ಯ ಹಾಗೂ ಇದು ಸಂವಿಧಾನ ವಿರೋಧಿ ಪ್ರಕ್ರಿಯೆ ಅಲ್ಲ ಎಂದು ಆದೇಶ ನೀಡಿದ ಹಿನ್ನೆಲೆಯಲ್ಲಿ ನಾವು ಈ ಮಹತ್ವದ ಕಾರ್ಯಕ್ಕೆ ಇಳಿಯಬೇಕಾಗಿದೆ.

ಕರ್ನಾಟಕ ಸರ್ಕಾರವು ಮತದಾರರಿಗೆ ಯಾವುದೇ ಸಮಸ್ಯೆಯಿಲ್ಲದೆ ವಿಷಯಗಳನ್ನು ಸರಿಪಡಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವಂತೆ ಚುನಾವಣಾ ಆಯೋಗದ ಮೇಲೆ ಒತ್ತಡ ಹೇರುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು ಪ್ರಸ್ತುತ ವೈಯಕ್ತಿಕವಾಗಿ ಮತ್ತು ಸಂಘಟನಾತ್ಮಕವಾಗಿ ನಾವು ಈ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಲು ಅವಕಾಶವಿದ್ದಲ್ಲಿ ಸಹಾಯ ಮಾಡಬಹುದು. ನೈಜ ಭಾರತೀಯರು ಮತ್ತು ನೈಜ ಕರ್ನಾಟಕದ ನಿವಾಸಿಗಳು ಯಾವುದೇ ಕಾರಣಕ್ಕೂ ಮತದಾನದ ಹಕ್ಕನ್ನು ಕಳೆದುಕೊಳ್ಳಬಾರದು ಅದೇ ಸಮಯದಲ್ಲಿ ವಿದೇಶಿಗರು, ನುಸುಳಿ ಕೋರರ ಪರವಾಗಿ ಧ್ವನಿ ಎತ್ತುವ ಸ್ವಾರ್ಥಿಗಳು ಹಾಗೂ ದೇಶದ್ರೋಹಿಗಳ ಗದ್ದಲಕ್ಕೆ ಚುನಾವಣಾ ಆಯೋಗ ಹಾಗೂ ನಮ್ಮ ರಾಜ್ಯ ಸರ್ಕಾರ ಮಣಿಯಬಾರದು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಆಹಾರವನ್ನು ಸಿದ್ದಪಡಿಸಿ ಮಕ್ಕಳಿಗೆ ಊಣಬಡಿಸುವವರೆಗೂ ತಪ್ಪದೆ ನಿಗಾವಹಿಸಿ

❑ ನೈಜ್ಯ ದೇಸೆ ನ್ಯೂಸ್

**ಸಿಂಧನೂರು: ಗೀತಾ ಹಿರೇಮಠ ತಾಲೂಕು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು ತಾಲೂಕ ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಿಂಧನೂರು ಇಂದು ನಗರದ ಡಾ. ಬಿ. ಆರ್. ಅಂಬೇಡ್ಕರ್ ಮೆಟ್ರಿಕ್ ಪೂರ್ವ ಬಾಲಕಿಂಯರ ವಸತಿ ನಿಲಯಕ್ಕೆ ಭೇಟಿ ನೀಡಿ ವಿದ್ಯಾರ್ಥಿನಿಯರಲ್ಲಿ ಆಹಾರ ಸೇವನೆಯಿಂದ ಆರೋಗ್ಯದಲ್ಲಿ ವ್ಯತ್ಯಾಸ ಕಂಡು ಬಂದ ಕಾರಣ ಅಡುಗೆ ಸಹಾಯಕರಿಗೆ ಹಾಗೂ ತಯಾರಕರಿಗೆ ಪ್ರತಿಯೊಬ್ಬರು ನಿಯಮಿತವಾಗಿ ತಲೆಗೆ ಕ್ಯಾಪ್(ತಲೆಗವಚ ) ಎಪ್ರಾನ್ (ಮುಂಗವಚ) ಧರಿಸಲು, ಉಗುರು ಸ್ವಚ್ಛವಾಗಿ ಇಟ್ಟುಕೊಳ್ಳಲು ನೀರಿನ ಸಂಪು, ನೀರು ಸಂಗ್ರಹಗಳ ಒಳಭಾಗದಲ್ಲಿ ನಿಯಮಾನುಸಾರ ಸ್ವಚ್ಛಗೊಳಿಸಲು ತಿಳಿಸಲಾಯಿತು.**

ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ರಾಯಚೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರ್ ತಾಲೂಕು ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಿಂಧನೂರ ರವರ ಅಡಿಯಲ್ಲಿ ವಸತಿ ನೀಲಯಕ್ಕೆ ಬೇಟಿ ನೀಡಿ, ಆಹಾರ ಪದಾರ್ಥಗಳ ದಾಸ್ತಾನು ಕೊಠಡಿಯಲ್ಲಿ ನೆಲದಲ್ಲಿ ಕಾಯಿಪಲ್ಲೆ ಹಾಕದಂತೆ, ದವಸ ಧಾನ್ಯಗಳ ಬಳಿ ಇಲಿ ಇತರೆ ಕೀಟಗಳು ನುಸುಳದಿರಲು ನಿಗಾವಹಿಸಲು ಅಡುಗೆ ಸಾಮಗ್ರಿಗಳ ಸ್ವಚ್ಛ ಮಾಡುವ, ಸ್ಥಳದಲ್ಲಿ ಸರಾಗವಾಗಿ ನೀರು ಹರಿದು ಹೋಗುವಂತೆ ನೋಡಿಕೊಳ್ಳಲು ಹೇಳಲಾಯಿತು.



ಮಕ್ಕಳಿಗೆ ಬಡಿಸುವ ಪೂರ್ವದಲ್ಲಿ ಕೈಗಳನ್ನು ಸಾಬೂನು ಮತ್ತು ನೀರಿನಿಂದ ಚೆನ್ನಾಗಿ ತೊಳೆದುಕೊಳ್ಳುವುದನ್ನು ಮರೆಯಬಾರದು ಎಂದು ತಿಳಿಸಲಾಯಿತು.

ಮಕ್ಕಳು ಮನೆಯಲ್ಲಾಗಲಿ, ವಸತಿ ನಿಲಯದಲ್ಲಾಗಲಿ ಕಲುಷಿತ ಆಹಾರದಿಂದ ಬರುವ ಕಾಯಿಲೆಗಳನ್ನು ತಡೆಯಲು ವೈಯಕ್ತಿಕ ಸ್ವಚ್ಛತೆಯ ಕಡೆ ಗಮನಹರಿಸಲು ಸುರಕ್ಷಿತ ನೀರು ಸೇವಿಸಲು, ಕೈಗಳನ್ನು ಸಾಬೂನು ಮತ್ತು ನೀರಿನಿಂದ ತೊಳೆಯಲು ವಿನಂತಿಸಲಾಯಿತು. ತರಕಾರಿಗಳನ್ನು ಶುದ್ಧ ನೀರಿನಲ್ಲಿ ತೊಳೆಯುವುದು, ಸಿದ್ದಪಡಿಸದ ಆಹಾರವನ್ನು ಪ್ರತ್ಯೇಕವಾಗಿಡುವುದು. ಕಾಳುಗಳನ್ನು ಗಾಳಿಯಾಡದ ಡಬ್ಬಗಳಲ್ಲಿ ಇಡುವುದು, ಅಡುಗೆಗೆ ಬಳಸುವ ಆಹಾರ ಪದಾರ್ಥಗಳ ಪ್ಯಾಕ್‌ಗಳ ಮೇಲೆ ಬಳಸಬಹುದಾದ ಅವಧಿ ( ಎಕ್ಸ್ಪೈರಿ ) ಪರಿಶೀಲಿಸಬೇಕು. ಆಹಾರದ ಗುಣಮಟ್ಟ ಮತ್ತು ಪ್ರಮಾಣವನ್ನು ನೋಡಿ ಬಳಸಬೇಕು. ಅಡುಗೆ ಮನೆಗೆ ಗೋಡೆಗಳ ಮೇಲೆ ಹಲ್ಲಿಗಳಿರದಂತೆ ಜೇಡಗಳು ಇರದಂತೆ ನೀಗಾವಹಿಸಲು ತಿಳಿಸಲಾಯಿತು. ಈ ಸಂದರ್ಭದಲ್ಲಿ ಉಮಾ ಆಶಾ ಕಾರ್ಯಕರ್ತೆ ಹಾಗೂ ಅಡುಗೆ ಸಹಾಯಕರು ತಯಾರಕರು ಉಪಸ್ಥಿತರಿದ್ದರು.

## ಕಂಪ್ಲಿ ವಲಯ 1ರ ವಲಯ ಮಟ್ಟದ ಪ್ರಾಥಮಿಕ ಶಾಲಾ ಮಕ್ಕಳ ಕ್ರೀಡಾಕೂಟಕ್ಕೆ ಚಾಲನೆ

❑ ನೈಜ್ಯ ದೇಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ: ಪಟ್ಟಣದ ಷಾಮಿಯಾಚಂದ್ ಸರಕಾರಿ ಪ್ರೌಢಶಾಲಾ ಆವರಣದಲ್ಲಿ ಬಳ್ಳಾರಿ ಶಿಕ್ಷಣ ಇಲಾಖೆ, ಕುರುಗೋಡು ಕ್ಷೇತ್ರಶಿಕ್ಷಣಾಧಿಕಾರಿಗಳ ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳ ಸಹಯೋಗದಲ್ಲಿ ಕಂಪ್ಲಿ ವಲಯ 1ರ ವಲಯ ಮಟ್ಟದ ಪ್ರಾಥಮಿಕ ಶಾಲಾ ಮಕ್ಕಳ ಎರಡು ದಿನದ ಕ್ರೀಡಾಕೂಟಗಳು ಸೋಮವಾರ ಆರಂಭಗೊಂಡವು.**

ಇಲ್ಲಿನ ಷಾಮಿಯಾಚಂದ್ ಶಾಲಾ ಆವರಣದಲ್ಲಿ ನಡೆದ ಕ್ರೀಡಾಕೂಟಕ್ಕೆ ಎನ್‌ಪಿಎಸ್ ರಾಜ್ಯಾಧ್ಯಕ್ಷ ನಾಗನಗೌಡ ಎಂ.ಎ, ಇಸಿಓ ರೇವಣ್ಣ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ



ತಾಲೂಕು ಅಧ್ಯಕ್ಷ ಹನುಮಂತಪ್ಪ ಇವರು ಕ್ರೀಡಾಜ್ಯೋತಿ ಬೆಳಗಿಸುವ ಮೂಲಕ ಅದ್ದೂರಿಯಾಗಿ ಚಾಲನೆ ನೀಡಿದರು. ಕ್ರೀಡಾಕೂಟದ ಕಾರ್ಯದರ್ಶಿ ರಮೇಶ ಶಿವಪುರ ಪ್ರಾಸ್ತಾವಿಕವಾಗಿ ಮಾತನಾಡಿ, ಇಲ್ಲಿನ ಕ್ರೀಡಾಕೂಟದಲ್ಲಿ ಮಕ್ಕಳು ತಮ್ಮ ಪ್ರತಿಭೆಗಳನ್ನು ಹೊರ ಹಾಕುವ ಮೂಲಕ ಮುಂದಿನ ಹಂತಕ್ಕೆ ತಲುಪುವದೊಂದಿಗೆ ತಾಲೂಕಿನ ಕೀರ್ತಿ ಪತಾಕಿ ಹಾರಿಸಬೇಕು. ಕ್ರೀಡೆಗಳಲ್ಲಿ ಭಾಗವಹಿಸಿ, ಕ್ರೀಡಾ ಮನೋಭಾವ ಬೆಳೆಸಿಕೊಳ್ಳಬೇಕು.

ಸೋಲು–ಗೆಲುವು ಎನ್ನದೇ ಎರಡನ್ನು ಸಮಾನವಾಗಿ ಸ್ವೀಕರಿಸಬೇಕು. ಕ್ರೀಡೆ ಮನುಷ್ಯನ ಅವಿಭಾಜ್ಯ ಅಂಗವಾಗಿದೆ. ಕ್ರೀಡೆಗೆ ಕೊನೆ ಇಲ್ಲ ಎಂದರು. ಎಸ್‌ಎನ್‌ಪೇಟೆ, 8ನೇ ವಾರ್ಡ್ ಕ್ಲಸ್ಟರಿನ ಶಾಲಾ ಮಕ್ಕಳು ಕಬಡ್ಡಿ, ಖೋ ಖೋ, ಥ್ರೋಬಾಲ್ ಸೇರಿದಂತೆ ವಿವಿಧ ಕ್ರೀಡೆಗಳಲ್ಲಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಹೆಚ್.ಜಡೆಪ್ಪ, ಜೋಗಿ ರುದ್ರಪ್ಪನಾಯಕ್, ಕ್ರೀಡಾಕೂಟದ ಅಧ್ಯಕ್ಷ ವೆಂಕಟರಮಣ, ಸಿಆರ್‌ಪಿಗಳಾದ ರೇಣುಕಾರಾಧ್ಯ, ಗಂಗಾಧರ, ಕರುಣಾಕರ, ಪ್ರಭಾಕರ ಸೇರಿದಂತೆ ಶಿಕ್ಷಕ ವೃಂದದವರು, ಶಾಲಾ ಮಕ್ಕಳು ಪಾಲ್ಗೊಂಡಿದ್ದರು.

## ಸಾಹಿತ್ಯ ಸಿಂಚನ

### ನಕ್ಷತ್ರಗಳ ನಡುವೆ ನಾನು

ನಕ್ಷತ್ರಗಳ ನಡುವೆ ನಾನೊಂದು ಕನಸಾಗಿ,
ಚಂದಿರನ ಬೆಳಕಿನಲ್ಲಿ ಮೌನದ ಸ್ವರವಾಗಿ.
ಅಗಾಧ ಆಕಾಶದ ಅಂಚು ಹುಡುಕುತ್ತಾ,
ನನ್ನದೇ ಲೋಕವೊಂದನ್ನು ಕಟ್ಟುತ್ತಾ ಸಾಗುವೆ.

ಮಿನುಗುವ ತಾರೆಗಳು ಮಾತು ಹೇಳುವಾಗ,
ನನ್ನ ಹೃದಯದ ನೋವು ಮೌನವಾಗುವಾಗ.
ಕಳೆದುಹೋದ ಕ್ಷಣಗಳು ನೆನಪಾಗಿ ಬಂದು,
ಕಣ್ಣಂಚಿನಲ್ಲಿ ಹನಿಯಾಗಿ ನಿಲ್ಲುವಾಗ.

ಕತ್ತಲೆಯ ದಾರಿಯಲಿ ಬೆಳಕಾಗಿ ತಾರೆ,
ನನ್ನ ಕನಸುಗಳಿಗೆ ನೀಡಿತು ಹೊಸ ಆಸರೆ.
ಬಿದ್ದ ಹೆಜ್ಜೆಗಳಿಗೆ ಧೈರ್ಯ ತುಂಬಿ,
ಮತ್ತೆ ನಡೆಯಲು ಕಲಿಸಿತು ಬದುಕಿನ ದಾರಿ.

ಚಂದಿರ ಕೇಳಿತು "ನಿನ್ನ ಕನಸು ಏನು"
ನಾನು ಹೇಳಿದೆ "ಆಕಾಶ ಮುಟ್ಟಬೇಕು ಎಂದು."
ತಾರೆಗಳು ನಕ್ಕು ಹಾರೈಸಿದವು ನನ್ನ ಪಯಣ,
ನಂಬಿಕೆಯೇ ನನ್ನ ಜೊತೆಗಾರ, ಕನಸೇ ನನ್ನ ಗುರಿ.

ನಕ್ಷತ್ರಗಳ ನಡುವೆ ನಾನೊಂದು ಪುಟ್ಟ ಬೆಳಕು,
ಆದರೂ ನನ್ನೊಳಗಿದೆ ಅಪಾರವಾದ ಹೊಳಪು.
ಆಕಾಶ ಎಷ್ಟೇ ದೂರವಿದ್ದರೂ ಪರವಾಗಿಲ್ಲ,
ಕನಸು ಕಾಣುವ ಹೃದಯವಿದ್ದರೆ ಸಾಕು
ನಕ್ಷತ್ರಗಳ ನಡುವೆ ನಾನೂ ಒಬ್ಬ ತಾರೆ.

## ರಾಣೇಮ್ಮ ನಿವಾಸಕ್ಕೆ ಅಜಯ್ ಸಿಂಗ್ ಭೇಟಿ ಸಾಂತ್ವನ

ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು :ತಾಲೂಕಿನ ಕರಡಕಲ್ ಗ್ರಾಮದ ನಿವಾಸಿ ರಾಣೇಮ್ಮ ಅವರ ದಾರುಣ ಕೊಲೆ ಪ್ರಕರಣದಿಂದ ಇಡೀ ಶೋಷಿತ ಸಮುದಾಯದಿಂದ ತೀವ್ರ ಅಪಘಾತಕ್ಕೊಳಗಾಗಿದ್ದ ಸಂದರ್ಭದಲ್ಲಿ ಸಂತ್ರಸ್ತರ ಮನೆಗೆ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವ ಅಜಯ್ ಸಿಂಗ್ ಭೇಟಿ ನೀಡಿ ಸಾಂತ್ವನ ಹೇಳಿದ್ದಾರೆ .**



ಕುಟುಂಬದ ದುಃಖದಲ್ಲಿ ಭಾಗಿಯಾಗಿ, ಸರ್ಕಾರದ ವತಿಯಿಂದಲೂ ಸೂಕ್ತ ಪರಿಹಾರ ಒದಗಿಸಲು ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು ಈ ಕುಟುಂಬಕ್ಕೆ ಸರಕಾರಿ ಕೆಲಸ , ಮನೆ ಹಾಗೂ ಸರಕಾರದಿಂದ ದೊರೆಯುವ ಎಲ್ಲ ಸಹಾಯಗಳನ್ನು ನೀಡಲು ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು ಆರೋಪಿಗಳನ್ನು ಈಗಾಗಲೇ ಬಂಧಿಸಲಾಗಿದ್ದು ಪ್ರಕರಣದ ಕುರಿತು ಕಾನೂನು ಬದ್ಧವಾಗಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಅಧಿಕಾರಿಗಳು ಈಗಾಗಲೇ ಮಾಹಿತಿ ನೀಡಿದ್ದಾರೆ ಮೃತರ ಕುಟುಂಬಕ್ಕೆನ್ಯಾಯ ದೊರಕಿಸುವ ನಿಟ್ಟಿನಲ್ಲಿ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಮತ್ತು ಗೃಹ ಸಚಿವರಿಗೂ ಮಾಹಿತಿ ಇದೆ ಇವರಿಗೆ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಲಿದೆ ಎಂದರು . ಈ ಸಂದರ್ಭದಲ್ಲಿ ಶಾಸಕ ಮಾನಪ್ಪ ಡಿ ವಜ್ಜಲ್ , ಮಾಜಿ ಉಸ್ತುವಾರಿ ಸಚಿವ ಭೋಸರಾಜು , ಸಂಸದ ಕುಮಾರ್ ನಾಯಕ್ , ಮಾಜಿ ಶಾಸಕ ಹುಲಗೇರಿ , ಪಾಮಯ್ಯ ಮುರಾರಿ, ಡಾ . ಶಿವಬಸಪ್ಪ ಹೆಸರೂರು . ಸಹಾಯಕ ಆಯುಕ್ತರು ಬಸವಣೆಪ್ಪಾ ಕಳಶೆಟ್ಟಿ , ಡಿ ವೈ ಎಸ್ ಪಿ ದತ್ತಾತ್ರೇಯ ಮಾಪಣ್ಣ ಕರ್ನಾಡ್ , ಸಿಪಿಐ ಹೊಸಕೇರಪ್ಪ , ಸತ್ಯ ನಾರಾಯಣ್ ಸಿಂಗ್ , ಮೋಹನ್ ಗೋಸ್ಲೆ ಸೇರಿದಂತೆ ಗ್ರಾಮಸ್ಥರು ಇದ್ದರು .

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

# ಕಾಂಗ್ರೆಸ್ ಸರಕಾರದ ವೈಫಲ್ಯ ಖಂಡಿಸಿ ನಮ್ಮ ಪಾದಯಾತ್ರೆಯಾಗಿದೆ : ಶಾಸಕ ವಜ್ಜಲ್

ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಭಾರತೀಯ ಜನತಾ ಪಕ್ಷದ ಬಿ ವೈ ವಿಜ ಯೇಂದ್ರ ಅವರ ನೇತೃತ್ವದಲ್ಲಿ ಲಿಂಗಸಗೂರಿನಿಂದ ಬಳ್ಳಾರಿಯವರಿಗೆ ನಡೆಯುವ ಪಾದಯಾತ್ರೆ ಬಿ ನಾಗೇಂದ್ರ ಅವರ ವಿರುದ್ಧ ವೈಯುಕ್ತಿಕವಾಗಿ ಅಲ್ಲ. ನಮ್ಮ ಹೋರಾಟ ಪರಿಶಿಷ್ಟ ಪಂಗಡದವರಿಗಾದ ಅನ್ಯಾಯದ ವಿರುದ್ದ ಹಾಗೂ ಕಾಂಗ್ರೆಸ್ ಸರಕಾರದ ವೈಫಲ್ಯ ಖಂಡಿಸಿ ನಮ್ಮ ಹೋರಾಟದ ಪಾದಯಾತ್ರೆಯಾಗಿದೆ ಎಂದು ಶಾಸಕ ಮಾನಪ್ಪ ಡಿ ವಜ್ಜಲ್ ಹೇಳಿದರು .**



ಅವರಿಂದು ಕಾಂಗ್ರೆಸ್ ಸರಕಾರದ ವೈಫಲ್ಯ ಖಂಡಿಸಿ ಸೆಪ್ಟೆಂಬರ್ 1ರಂದು ಲಿಂಗಸಗೂರಿನಿಂದ ಬಳ್ಳಾರಿ ವರೆಗೆ ನಡೆಯುವ ಪಾದಯಾತ್ರೆಯ ಪೂರ್ವಭಾವಿ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು ಪರಿಶಿಷ್ಟ ಪಂಗಡದ ಬಡ ಕುಟುಂಬಗಳಿಗೆ ರೈತರಿಗೆ ಹಾಗೂ ವಿದ್ಯಾರ್ಥಿಗಳಿಗೆ ಸೇರಬೇಕಾದ ಈ ರಾಜ್ಯದ ನಮ್ಮೆಲ್ಲರ ತೆರಿಗೆಯ ಹಣ ದುರುಪಯೋಗವಾಗಿದೆ. ಹಾಗಾಗಿ ಕಾಂಗ್ರೆಸ್ನ ಧೋರಣೆ ಪರಿಶಿಷ್ಟ ಪಂಗಡದವ ರಿಗೆ ಮಾಡಿದ ಅನ್ಯಾಯದ ವಿರುದ್ಧ ನಮ್ಮ ಹೋರಾಟವಾಗಿದೆ. ಕೇವಲ ನಾಗೇಂದ್ರ ರಾಜೀನಾಮೆ ನೀಡಿದರೆ ಸಮಸ್ಯೆ ಪರಿಹಾರವಾಗು ವುದಿಲ್ಲ. 187 ಕೋಟಿ ವಾಲ್ಮೀಕಿ ನಿಗಮದ ಹಣ ಪರಿಶಿಷ್ಟ ಪಂಗಡದ ಬಡ ಹೆಣ್ಣು ಮಕ್ಕಳ ಬಡ ಕುಟುಂಬಕ್ಕೆ ವಿದ್ಯಾವಂತ ಯುವಕರಿಗೆ ಸಿಗಬೇಕಾದ ಯೋಜನೆಗಳು ಸಿಕ್ಕಂತಾಗುವುದಿಲ್ಲ.

ಸರಕಾರ 187 ಕೋಟಿ ರೂಪಾಯಿ ಹಣವನ್ನು ಮತ್ತೆ ವಾಲ್ಮೀಕಿ ನಿಗಮಕ್ಕೆ ಕೊಟ್ಟು ಫಲಾನುಭವಿಗಳಿಗೆ ಆ ಹಣ ವಿತರಣೆಯಾದಾಗ ಮಾತ್ರ ಆ ಸಮಾಜಕ್ಕೆ ನ್ಯಾಯ ಸಿಕ್ಕಂತಾಗುತ್ತಿದೆ. ಬಿ ನಾಗೇಂದ್ರ ಅವರು ಹಿಂದೆ ರಾಜೀನಾಮೆ ನೀಡಿದಾಗ ಅವರ ವಿರುದ್ಧ ಕೇವಲ ಪ್ರಕರಣ ದಾಖಲಾಗಿತ್ತು ಅಷ್ಟೇ. ಅವರ ವಿರುದ್ಧದ ತನಿಖೆ ಇನ್ನು ಪೂರ್ಣಗೊಂಡಿ ರಲಿಲ್ಲ. ಈಗ ತನಿಖೆ ಪೂರ್ಣಗೊಂಡು ಎಲ್ಲಾ ದಾಖಲೆಗಳನ್ನು ಈ ಡಿ ಅಧಿಕಾರಿಗಳು ನೀಡಿದ್ದಾರೆ . ಸಮಾಜಕ್ಕೆ ನ್ಯಾಯ ಸಿಗಲು ನಮ್ಮ ಹೋರಾಟವಾಗಿದೆ ಹಾಗೂ ಇದರ ಜೊತೆಗೆ ಹಲವಾರು ಸಮಸ್ಯೆಗಳ ಪರಿಹಾರಕ್ಕಾಗಿ ಈ ಪಾದಯಾತ್ರೆ ನಡೆಯಲಿದೆ ಕಾಂಗ್ರೆಸ್ ಸರ್ಕಾರದ ಅನ್ಯಾಯ ಎಲ್ಲರಿಗೂ ತಿಳಿಯ ಬೇಕು , ಲಿಂಗಸಗೂರಿ ನಿಂದ ಬಳ್ಳಾರಿಯವರಿಗೆ ನಡೆಯುವ ಈ ಪಾದಯಾತ್ರೆ ಶಾಸಕ ನಾಗೇಂದ್ರ ವಿರುದ್ಧದ ಬ್ರಷ್ಟಾಚಾರ, ಬರಗಾಲ ಘೋಷಣೆಯಲ್ಲಿನ ತಾರತಮ್ಯ, ನೀರಾವರಿ ಯೋಜನೆಗಳ ನಿರ್ಲಕ್ಷ ಹಾಗೂ ಕಾಂಗ್ರೆಸ್ ಸರಕಾರದ ವೈಫಲ್ಯಗಳನ್ನು ಖಂಡಿಸಿ ಈ ಪಾದಯಾತ್ರೆ ನಡೆಯಲಿದೆ.

ಈ ಪಾದಯಾತ್ರೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷರಾದ ಬಿ ವೈ ವಿಜಯೇಂದ್ರ, ಹಾಗೂ ವಿರೋಧ ಪಕ್ಷದ ನಾಯಕರಾದ ಆರ್. ಅಶೋಕ್ , ಬಿ ಎಸ್ ಯಡಿಯೂರಪ್ಪ , ಚಲವಾದಿ ನಾರಾಯಣಸ್ವಾಮಿ, ಸಿ ಟಿ ರವಿ , ಸೇರಿದಂತೆ ಹಲವಾರು ಬಿಜೆಪಿಯ ನಾಯಕರು ಈ ಪಾದಯಾತ್ರೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಲಿಂಗಸೂರಿನಲ್ಲಿ ಪ್ರಾರಂಭವಾಗುವ ಈ ಪಾದಯಾತ್ರೆಯ ಕಾರ್ಯಕ್ರಮದಲ್ಲಿ 30 ಸಾವಿರ ಕಾರ್ಯಕರ್ತರು ಸೇರುತ್ತಿದ್ದು ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಈ ಪಾದಯಾತ್ರೆಯಲ್ಲಿ ಪಾಲ್ಗೊಂಡು ಕಾಂಗ್ರೆಸ್ ಸರ್ಕಾರದ ವೈಫಲ್ಯಗಳನ್ನು ಜನತೆಯ ಮುಂದೆ ಇಡಬೇಕಾಗಿದೆ ಎಂದು ಅವರು ಹೇಳಿದರು. ಈ ಸಂದರ್ಭದಲ್ಲಿ ಬಿ ಜೆ ಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ ರಾಜೀವ , ಬಿಜೆಪಿ ಜಿಲ್ಲಾಧ್ಯಕ್ಷ ವೀರನಗೌಡ ಲೆಕ್ಕಿಹಾಳ್ , ತಾಲೂಕ ಅಧ್ಯಕ್ಷ ನಾಗಭೂಷಣ್ , ಶೋಭಾ ಸೇರಿದಂತೆ ಇತರರು ಇದ್ದರು .

# ಶ್ರದ್ಧೆ–ಭಕ್ತಿಯ ಸಂಗಮದಲ್ಲಿ ಶ್ರೀ ಹುಚ್ಚ ಬುಡೇಶ್ವರ ಜಾತ್ರಾ ಮಹೋತ್ಸವ

## ಪೋತ್ನಾಳ ಗ್ರಾಮದ ಆರಾಧ್ಯ ದೈವದ ಜಾತ್ರೆಗೆ ಭಕ್ತರ ಮಹಾಪೂರ –ಸಾಮೂಹಿಕ ವಿವಾಹ, ಸೌಹಾರ್ದ ಮತ್ತು ಗ್ರಾಮೀಣ ಸಂಸ್ಕೃತಿಯ ವೈಭವ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: "ಶ್ರದ್ಧೆ ಇರುವಲ್ಲಿ ಶಕ್ತಿ, ಭಕ್ತಿ ಇರುವಲ್ಲಿ ಹುಚ್ಚ ಬುಡ್ಡಪ್ಪನ ಅನುಗ್ರಹ" ಎಂಬ ಅಪಾರ ನಂಬಿಕೆಯೊಂದಿಗೆ ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಪೋತ್ನಾಳ ಗ್ರಾಮದ ಆರಾಧ್ಯ ದೈವ ಶ್ರೀ ಹುಚ್ಚ ಬುಡೇಶ್ವರ ಸ್ವಾಮಿಯ ಜಾತ್ರಾ ಮಹೋತ್ಸವ ಪ್ರತಿವರ್ಷದಂತೆ ಈ ಬಾರಿಯೂ ಭಕ್ತಿ, ಸಂಭ್ರಮ ಹಾಗೂ ಸಡಗರದಿಂದ ನಡೆಯಲಿದೆ. ಪೋತ್ನಾಳ ಗ್ರಾಮದ ಜನರ ಪಾಲಿಗೆ ಶ್ರೀ ಹುಚ್ಚ ಬುಡೇಶ್ವರ ಸ್ವಾಮಿಯು ಕೇವಲ ಆರಾಧನೆಯ ದೈವವಲ್ಲ.**




ಗ್ರಾಮದ ರಕ್ಷಕ, ಭಕ್ತರ ಆಶಾಕಿರಣ ಹಾಗೂ ಸಂಕಷ್ಟಗಳನ್ನು ದೂರ ಮಾಡಿ ನೆಮ್ಮದಿ, ಸಮೃದ್ಧಿ ಕರುಣಿಸುವ ದೈವಸ್ವರೂಪವಾಗಿ ತಲೆತಲಾಂತರಗಳಿಂದ ಪೂಜಿಸಲ್ಪಡುತ್ತಿದ್ದಾರೆ. ಸ್ವಾಮಿಯ ಮೇಲಿನ ಅಚಲ ನಂಬಿಕೆ ಹಾಗೂ ಭಕ್ತಿಯೇ ಈ ಜಾತ್ರಾ ಮಹೋತ್ಸವದ ಪ್ರಮುಖ ಶಕ್ತಿಯಾಗಿದೆ. ಬಡ ಕುಟುಂಬಗಳಿಗೆ ಆಶಾಕಿರಣವಾಗುವ ಸಾಮೂಹಿಕ ವಿವಾಹ ಜಾತ್ರೆಯ ಮತ್ತೊಂದು ಪ್ರಮುಖ ಆಕರ್ಷಣೆಯೆಂದರೆ ಸಾಮೂಹಿಕ ವಿವಾಹ ಕಾರ್ಯಕ್ರಮ. ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ಯುವಕ?ಯುವತಿಯರಿಗೆ ನೆರವಾಗುವ ಸದುದ್ದೇಶದಿಂದ ಆಯೋಜಿಸಲಾಗುವ ಈ ಕಾರ್ಯಕ್ರಮವು ಕೇವಲ ವಿವಾಹ ಸಮಾರಂಭವಾಗಿರದೆ, ಸಮಾಜದಲ್ಲಿ ಸಮಾನತೆ, ಸಹಕಾರ, ಮಾನವೀಯತೆ ಮತ್ತು ಸಾಮಾಜಿಕ ಹೊಣೆಗಾರಿಕೆಯ ಸಂದೇಶವನ್ನು ಸಾರುವ ಮಹತ್ವದ ಹೆಜ್ಜೆಯಾಗಿದೆ. ಆರ್ಥಿಕ ಸಂಕಷ್ಟದಿಂದಾಗಿ ಮದುವೆಯ ಹೊಣೆಗಾರಿಕೆಯನ್ನು ನಿರ್ವಹಿಸಲು ಕಷ್ಟಪಡುವ ಕುಟುಂಬಗಳಿಗೆ ಸಾಮೂಹಿಕ ವಿವಾಹವು ದೊಡ್ಡ ಆಸರೆಯಾಗಿದ್ದು,

ಸರಳತೆ ಹಾಗೂ ಸಾಮೂಹಿಕ ಸಹಕಾರದ ಮೂಲಕ ಹೊಸ ಜೀವನಕ್ಕೆ ಕಾಲಿಡುವ ದಂಪತಿಗಳಿಗೆ ಸಮಾಜದ ಬೆಂಬಲ ದೊರೆಯುವಂತಾಗಿದೆ. ಸರ್ವಧರ್ಮ ಸೌಹಾರ್ದ ಸಾರುವ ಜಾತ್ರೆ ಶ್ರೀ ಹುಚ್ಚ ಬುಡೇಶ್ವರ ಜಾತ್ರೆಯ ಮತ್ತೊಂದು ವಿಶೇಷತೆ ಎಂದರೆ ಇದು ಸರ್ವಧರ್ಮದ ಜನರನ್ನು ಒಗ್ಗೂಡಿಸುವ ಸೌಹಾರ್ದದ ಜಾತ್ರೆ. ಜಾತಿ, ಧರ್ಮ, ಭಾಷೆ ಹಾಗೂ ಭೇದ–ಭಾವಗಳನ್ನು ಮರೆತು ವಿವಿಧ ಸಮುದಾಯಗಳ ಜನರು ಭಕ್ತಿ, ಪ್ರೀತಿ ಮತ್ತು ಸಹೋದರತ್ವದ ಭಾವನೆಯೊಂದಿಗೆ ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ. "ವೈವಿಧ್ಯತೆಯಲ್ಲಿ ಏಕತೆ" ಎಂಬ ಭಾರತದ ಮಹೋನ್ನತ ಸಂದೇಶವನ್ನು ಗ್ರಾಮೀಣ ಮಟ್ಟದಲ್ಲಿ ಜೀವಂತವಾಗಿರಿಸುವ ಈ ಜಾತ್ರೆ, ಪರಸ್ಪರ ಗೌರವ, ಸಹಬಾಳ್ವೆ ಹಾಗೂ ಸೌಹಾರ್ದಕ್ಕೆ ಮಾದರಿಯಾಗಿದೆ. ಭಕ್ತರ ಸಂಭ್ರಮ ? ಗ್ರಾಮದಲ್ಲಿ ಹಬ್ಬದ ವಾತಾವರಣ ಜಾತ್ರಾ ಮಹೋತ್ಸವದ ಹಿನ್ನೆಲೆಯಲ್ಲಿ ಪೋತ್ನಾಳ ಗ್ರಾಮದೆಲ್ಲೆಡೆ ಹಬ್ಬದ ಸಂಭ್ರಮ ಮನೆಮಾಡುತ್ತದೆ. ದೇವರ ದರ್ಶನ ಹಾಗೂ ಆಶೀರ್ವಾದ ಪಡೆಯಲು ಪೋತ್ನಾಳ ಮಾತ್ರವಲ್ಲದೆ ಸುತ್ತಮುತ್ತಲಿನ ಗ್ರಾಮಗಳಿಂದಲೂ ಸಾವಿರಾರು ಭಕ್ತರು ಆಗಮಿಸಿ ಪೂಜೆ, ಪುನಸ್ಕಾರ, ಹರಕೆ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಕ್ತಿಯಿಂದ ಭಾಗವಹಿಸುತ್ತಾರೆ.

ಜಾತ್ರೆಯ ಅಂಗವಾಗಿ ನಡೆಯುವ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಗ್ರಾಮೀಣ ಜನಜೀವನದ ಸೊಗಡನ್ನು ಮತ್ತಷ್ಟು ಹೆಚ್ಚಿಸುತ್ತವೆ. ಹಿರಿಯರಿಂದ ಕಿರಿಯರವರೆಗೆ ಎಲ್ಲರೂ ಒಟ್ಟಾಗಿ ಪಾಲ್ಗೊಳ್ಳುವ ಮೂಲಕ ತಲೆತಲಾಂತರಗಳಿಂದ ಬಂದಿರುವ ಆಚ–'ರಣೆಗಳು ಮತ್ತು ಸಂಪ್ರದಾಯಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಕಾರ್ಯವೂ ನಡೆಯುತ್ತದೆ. ಧಾರ್ಮಿಕ ಉತ್ಸವದ ಜೊತೆಗೆ ಸಾಮಾಜಿಕ ಸಂದೇಶ ಶ್ರೀ ಹುಚ್ಚ ಬುಡೇಶ್ವರ ಜಾತ್ರಾ ಮಹೋತ್ಸವವು ಕೇವಲ ಧಾರ್ಮಿಕ ಆಚರಣೆಗೆ ಸೀಮಿತವಾಗಿಲ್ಲ. ಇದು ಜನರನ್ನು ಒಂದೆಡೆ ಸೇರಿಸುವ, ಸಂಬಂಧಗಳನ್ನು ಗಟ್ಟಿಗೊಳಿಸುವ, ಪರಸ್ಪರ ಪ್ರೀತಿ?ಸೌಹಾರ್ದ ಬೆಳೆಸುವ, ಬಡವರ ಬದುಕಿಗೆ ಆಸರೆಯಾಗುವ ಹಾಗೂ ಗ್ರಾಮೀಣ ಸಂಸ್ಕೃತಿ?ಪರಂಪರೆಯನ್ನು ಉಳಿಸಿ ಬೆಳೆಸುವ ಸಾಮಾಜಿಕ ಉತ್ಸವವೂ ಆಗಿದೆ.

ಭಕ್ತಿ, ಸೇವೆ, ಸಹಕಾರ ಮತ್ತು ಸೌಹಾರ್ದದ ಸಂದೇಶವನ್ನು ಹೊತ್ತು ಸಾಗುವ ಈ ಜಾತ್ರೆಯು ಪೋತ್ನಾಳ ಗ್ರಾಮದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಪರಂಪರೆಯ ಹೆಮ್ಮೆಯ ಪ್ರತೀಕವಾಗಿದೆ. ಶ್ರೀ ಹುಚ್ಚ ಬುಡೇಶ್ವರ ಸ್ವಾಮಿಯ ಕೃಪಾಕಟಾಕ್ಷದಿಂದ ಪೋತ್ನಾಳ ಗ್ರಾಮ ಸದಾ ಸುಭಿಕ್ಷವಾಗಿರಲಿ. ಗ್ರಾಮದ ಪ್ರತಿಯೊಂದು ಮನೆಗೂ ಆರೋಗ್ಯ, ಸಂತೋಷ, ಶಾಂತಿ ಮತ್ತು ಸಮೃದ್ಧಿ ನೆಲೆಸಲಿ. ಭಕ್ತರ ಎಲ್ಲಾ ಸಂಕಷ್ಟಗಳು ದೂರವಾಗಿ, ಎಲ್ಲರ ಬದುಕಿನಲ್ಲಿ ನೆಮ್ಮದಿ ಹಾಗೂ ಯಶಸ್ಸು ದೊರೆಯಲಿ ಎಂಬುದು ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಭಕ್ತರ ಆಶಯವಾಗಿದೆ.

# ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಕಟ್ಟಡ ನಿರ್ಮಾಣಕ್ಕೆ ನನ್ನ ನಿಧಿಯಿಂದ 20 ಲಕ್ಷ ರೂ ನೀಡುವುದಾಗಿ ಘೋಷಣೆ ಮಾಡಿದ ಹಿರಿಯ ಪತ್ರಕರ್ತ ಹಾಗೂ ವಿಧಾನ ಪರಿಷತ್ ಸದಸ್ಯ ಕೆ ಶಿವಕುಮಾರ್

ನೈಜ್ಯ ದೆಸೆ ನ್ಯೂಸ್

**ತಾಂಡವಪುರ:ಮೈಸೂರು ಜಿಲ್ಲಾ ಪತ್ರಕರ್ತರ ಸಂಘಕ್ಕ ಸಂಘದ ಕಟ್ಟಡ ನಿರ್ಮಾಣಕ್ಕೆ ನನ್ನ ವಿಧಾನ ಪರಿಷತ ಅನುದಾನದಲ್ಲಿ 20 ಲಕ್ಷ ರೂಗಳನ್ನು ನೀಡುವುದಾಗಿ ಹಿರಿಯ ಪತ್ರಕರ್ತರು ಹಾಗೂ ವಿಧಾನಪರಿಷತ್ ಸದಸ್ಯರಾದ ಕೆ ಶಿವಕುಮಾರ್ ಅವರು ಘೋಷಣೆ ಮಾಡಿದರು ಅವರು ಮೈಸೂರಿನಜಲದರ್ಶಿನಿ**



ಅತಿಥಿಗೃಹದ ಆವರಣದಲ್ಲಿರುವ ತಮ್ಮ ನೂತನ ಕಚೇರಿಯನ್ನು ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ರವರು ಉದ್ಘಾಟಿಸಿದರು ಇದೇ ವೇಳೆ ಮಾತನಾಡಿದ ಶಿವಕುಮಾರ್ ಅವರು ಸಿದ್ದರಾಮಯ್ಯನವರು ಮುಖ್ಯಮಂತ್ರಿ ಆಗಿದ್ದಾಗ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಕಟ್ಟಡ ನಿರ್ಮಾಣಕ್ಕೆ 5 ಕೋಟಿ ರೂಗಳ ಅನುದಾನವನ್ನು ನೀಡಿದ್ದಾರೆ ಅದರ ಜೊತೆಗೆ ನನ್ನ ವಿಧಾನಪರಿಷತ್ ಅನುದಾನದಲ್ಲಿ ಸುಮಾರು 20 ಲಕ್ಷ ರೂಗಳನ್ನು ನೀಡುವುದಾಗಿ ಇದೇ ಸಂದರ್ಭದಲ್ಲಿ ತಿಳಿಸಿದರು ಅಲ್ಲದೆ ನನ್ನನ್ನು ವಿಧಾನ ಪರಿಷತ್ತಿನ ಸದಸ್ಯನಾಗಿ ನಾಮನಿರ್ದೇಶನ ಮಾಡಿದ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆಯವರು, ನಮ್ಮ ನಾಯಕರಾದ ರಾಹುಲ್ ಗಾಂಧಿ ಅವರು, ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಹಾಗೂ ಅಂದಿನ ಕೆಪಿಸಿಸಿ ಅಧ್ಯಕ್ಷರು ಹಾಗೂ ಪ್ರಸ್ತುತ ಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್ ಅವರಿಗೆ ನನ್ನ ಕೃತಜ್ಞತೆ ಗಳನ್ನು ತಿಳಿಸಿದ ಅವರು ವಿಧಾನ ಪರಿಷತ್ತಿನ ಸದಸ್ಯನಾಗಿ ಜನರ ಕುಂದುಕೊರತೆಗಳನ್ನು ಆಲಿಸಲು ಹಾಗೂ ಸರ್ಕಾರದ ಜನರಪ ಯೋಜನೆಗಳನ್ನು ಸಾರ್ವಜನಿಕರಿಗೆ ತಲುಪಿಸಲು ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ. ಎಂದು ಹೇಳಿದರು ಅಧಿಕಾರ ಎಂಬುದು ಚಲಾಯಿಸುವುದಕ್ಕೆ ಮಾತ್ರವಲ್ಲ, ಬದಲಿಗೆ ಜನಸಾಮಾನ್ಯರ ಸೇವೆಗೆ ಸಿಕ್ಕಿರುವ ಸದಾವಕಾಶ ಎಂದು ಭಾವಿಸಿದ್ದೇನೆ. ಈ ಕಚೇರಿ ಪ್ರತಿಯೊಬ್ಬರಿಗೂ ಬಾಗಿಲು ತೆರೆದ ಮನೆ. ಎಂದು ಅವರು ತಿಳಿಸಿದರು ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿಯ ಕ್ಷೇಮನಿಧಿಗೆ ವೈಯಕ್ತಿಕವಾಗಿ 2 ಲಕ್ಷ ರೂ., ಪ್ಯಾರಾ ಅಥ್ಲೀಟ್ ಶಿಲ್ಪ ಕೆ.ಎಸ್ ಮತ್ತು ಚಾಮರಾಜನಗರ ಜಿಲ್ಲಾ ಪತ್ರಕರ್ತರ ಸಂಘಕ್ಕೆ ಸಹಾಯ ಧನ ಹಾಗೂ ವಿಶೇಷ ಚೇತನರಿಗೆ ತ್ರಿಚಕ್ರ ವಾಹನವನ್ನು ಸಿದ್ದರಾಮಯ್ಯ ಅವರಿಂದ ವಿತರಿಸಲಾಯಿತು.

ಈ ಸಮಾರಂಭಕ್ಕೆ ಆಗಮಿಸಿದ ನಗರಾಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ ಎಸ್.ಯತೀಂದ್ರ ಸಿದ್ಧರಾಮಯ್ಯ ಶಾಸಕರಾದ ಕೆ.ಹರೀಶ್ ಗೌಡ , ಹೆಚ್.ಎಂ.ಗಣೇಶ್ ಪ್ರಸಾದ್ , ದರ್ಶನ್ ಧ್ರುವನಾರಾಯಣ್ ಡಿ.ರವಿಶಂಕರ್ , ಮಾಜಿ ಶಾಸಕರಾದ ಹೆಚ್.ಪಿ.ಮಂಜುನಾಥ್ , ಎಂ.ಕೆ.ಸೋಮಶೇಖರ್ , ಕೆಪಿಸಿಸಿ ವಕ್ತಾರರಾದ ಎಂ.ಲಕ್ಷ್ಮಣ್ ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷ ಬಿಎಂ ರಾಮು, ಗ್ಯಾರಂಟಿ ಯೋಜನೆಯ ರಾಜ್ಯ ಉಪಾಧ್ಯಕ್ಷೆ ಪುಷ್ಪ ಅಮರನಾಥ್ ಜಿಲ್ಲಾಧ್ಯಕ್ಷರಾದ ಡಾಕ್ಟರ್ ಬಿ ಜೆ ವಿಜಯ್ ಕುಮಾರ್ ಅರುಣ್ ಕುಮಾರ್ , ಮಾಜಿ ಮೇಯರ್ ಪುರುಷೋತ್ತಮ್ ಅವರು, ನಾರಾಯಣ್ ಅವರು, ಭೈರಪ್ಪ ಅವರು, ಮುಡಾ ಮಾಜಿ ಅಧ್ಯಕ್ಷರಾದ ಹೆಚ್.ವಿ.ರಾಜೀವ್ ವಕೀಲರು ಹಾಗೂ ಮೈಸೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಎಂ ಸಿ ಹುಂಡಿ ಶಿವು ಪ್ರಸಾದ್, ಮೈಸೂರು ಜಿಲ್ಲಾ ಕಾಂಗ್ರೆಸ್ ಪಕ್ಷದ ಹಿರಿಯ ಕಾರ್ಯದರ್ಶಿಗಳಾದ ಸಕಳ್ಳಿ ಬಸವರಾಜು ಸಿದ್ದರಾಜು ಅವರು ಸೇರಿದಂತೆ ನಿಗಮ ಮಂಡಳಿ ಅಧ್ಯಕ್ಷರು, ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರು, ಎಲ್ಲಾ ಪದಾಧಿಕಾರಿಗಳು, ಕಾರ್ಯಕರ್ತರು, ಪ್ರಗತಿಪರ ಚಿಂತಕರು, ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ವಿದ್ಯಾರ್ಥಿ ಸಂಘಟನೆಯ ನಾಯಕರು, ಹಲವು ಸಂಘ ಸಂಸ್ಥೆಗಳ ಮುಖಂಡರು, ಪದಾಧಿಕಾರಿಗಳು ಹಾಗೂ ಮುಂತಾದವರು ಹಾಜರಿದ್ದರು

# ಊಟಿ–ಯಲಗಟ್ಟಿ ಸಂಪರ್ಕ ರಸ್ತೆಯಲ್ಲಿ 10 ಲಕ್ಷದ ಕಾಮಗಾರಿ ಅಡ್ಡಗೋಡೆ ನಿರ್ಮಾಣಕ್ಕೆ ಗ್ರಾಮಸ್ಥರ ಆಕ್ಷೇಪ; ತೆರವಿಗೆ ಒತ್ತಾಯ

ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ: ಸಮೀಪದ ಪಲಕನಮರಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಊಟಿ ಹಾಗೂ ಯಲಗಟ್ಟಿ ಗ್ರಾಮಗಳನ್ನು ಸಂಪರ್ಕಿಸುವ ಪ್ರಮುಖ ರಸ್ತೆಯಲ್ಲಿರುವ ದುರ್ಗಾದೇವಿ ದೇವಸ್ಥಾನದ ಮುಂಭಾಗದಲ್ಲಿ ನಿರ್ಮಿಸಲಾಗುತ್ತಿರುವ ಅಡ್ಡಗೋಡೆಯನ್ನು ಕೂಡಲೇ ತೆರವುಗೊಳಿಸಿ, ಸಾರ್ವಜನಿಕರ ಸಂಚಾರಕ್ಕೆ ರಸ್ತೆ ಮುಕ್ತಗೊಳಿಸಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.**





ಊಟಿ?ಯಲಗಟ್ಟಿ ಗ್ರಾಮಗಳ ನಡುವಿನ ಪ್ರಮುಖ ಸಂಪರ್ಕ ರಸ್ತೆಯಾಗಿರುವ ಈ ಮಾರ್ಗದಲ್ಲಿ ಅಡ್ಡಗೋಡೆ ನಿರ್ಮಿಸುತ್ತಿರುವುದರಿಂದ ಸಾರ್ವಜನಿಕರು ಹಾಗೂ ವಾಹನ ಸವಾರರಿಗೆ ತೀವ್ರ ತೊಂದರೆಯಾಗುತ್ತಿದೆ ಎಂದು ಗ್ರಾಮಸ್ಥ ಶಿವನಗೌಡ ಊಟಿ ಆರೋಪಿಸಿದ್ದಾರೆ. ಅಡ್ಡಗೋಡೆ ನಿರ್ಮಾಣ ಕಾಮಗಾರಿಗೆ ಸುಮಾರು ?10 ಲಕ್ಷ ವೆಚ್ಚವಾಗುತ್ತಿದ್ದು, ಲ್ಯಾಂಡ್ ಆರ್ಮಿ ಇಲಾಖೆಯಿಂದ ಕಾಮಗಾರಿ ಕೈಗೊಳ್ಳಲಾಗುತ್ತಿದೆ ಎಂದು ತಿಳಿದುಬಂದಿದೆ. ಆದರೆ ದೇವಸ್ಥಾನವನ್ನು ನೂತನವಾಗಿ ನಿರ್ಮಿಸುವ ಉದ್ದೇಶದಿಂದ ಭಕ್ತರಿಂದ ಸಂಗ್ರಹಿಸಲಾದ ಹಣವನ್ನು ದೇವಸ್ಥಾನದ ಕಾಮಗಾರಿ ಪೂರ್ಣಗೊಳಿಸಲು ಬಳಸದೆ, ಅಡ್ಡಗೋಡೆ ನಿರ್ಮಾಣಕ್ಕೆ ಬಳಸಲಾಗುತ್ತಿದೆ ಎಂಬ ಆರೋಪವೂ ಕೇಳಿಬಂದಿದೆ. ಹೀಗಾಗಿ ಕಾಮಗಾರಿಗೆ ಬಳಸುತ್ತಿರುವ ಹಣದ ಮೂಲ ಯಾವುದು ಎಂಬುದನ್ನು ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಸ್ಪಷ್ಟಪಡಿಸಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಬಹುಕಾಲದಿಂದ ಸಾರ್ವಜನಿಕರು ಬಳಸುತ್ತಿರುವ ರಸ್ತೆಯಲ್ಲಿ ಅಡ್ಡಗೋಡೆ ನಿರ್ಮಿಸಿರುವುದರಿಂದ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗಿದೆ. ಊಟಿ ಚಿನ್ನದ ಗಣಿ ಕಂಪನಿಯ ಕಾರ್ಮಿಕರು ಸೇರಿದಂತೆ ಪ್ರತಿನಿತ್ಯ ಹಲವಾರು ಜನರು ಈ ಮಾರ್ಗವನ್ನು ಬಳಸುತ್ತಿದ್ದಾರೆ. ರಸ್ತೆಯ ಪಕ್ಕದಲ್ಲಿ ತಾತ್ಕಾಲಿಕ ಪರ್ಯಾಯ ಮಾರ್ಗ ಕಲ್ಪಿಸಲಾಗಿದ್ದರೂ ಅದು ವಾಹನ ಸಂಚಾರಕ್ಕೆ ಸಮರ್ಪಕವಾಗಿಲ್ಲ. ಈ ಮಾರ್ಗದಲ್ಲಿ ಕೆಲವರು ವಾಹನಗಳೊಂದಿಗೆ ಬಿದ್ದು ಅಪಘಾತಕ್ಕೀಡಾಗಿದ್ದಾರೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ. ಇದೇ ವೇಳೆ ಅಡ್ಡಗೋಡೆ ನಿರ್ಮಾಣ ಕಾಮಗಾರಿಯ ಗುಣಮಟ್ಟದ ಬಗ್ಗೆಯೂ ಗ್ರಾಮಸ್ಥರು ಪ್ರಶ್ನೆ ಎತ್ತಿದ್ದಾರೆ. ಕಾಮಗಾರಿಯಲ್ಲಿ ಗುಡ್ಡದ ಕಲ್ಲು, ಮಣ್ಣು ಹಾಗೂ ಕಾಲುವೆ?ಹಳ್ಳದ ಉಸುಕು ಬಳಸಲಾಗಿದೆ ಎಂಬ ಆರೋಪ ಮಾಡಿದ್ದು, ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿಯನ್ನು ಪರಿಶೀಲಿಸಬೇಕು. ಕಾಮಗಾರಿಯ ಗುಣಮಟ್ಟದಲ್ಲಿ ಲೋಪ ಕಂಡುಬಂದರೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಮುಂದಿನ ವಾರ ದುರ್ಗಾದೇವಿ ದೇವಸ್ಥಾನದ ಜಾತ್ರೆ ನಡೆಯಲಿದ್ದು, ಈ ಸಂದರ್ಭದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಹಾಗೂ ಸಾರ್ವಜನಿಕರು ಆಗಮಿಸುವ ನಿರೀಕ್ಷೆಯಿದೆ. ಅಡ್ಡಗೋಡೆಯಿಂದ ಜಾತ್ರಾ ಸಂದರ್ಭದಲ್ಲಿ ಸಂಚಾರ ದಟ್ಟಣೆ ಹಾಗೂ ಅಪಘಾತದ ಸಾಧ್ಯತೆ ಮತ್ತಷ್ಟು ಹೆಚ್ಚಾಗಬಹುದು. ಆದ್ದರಿಂದ ಜಾತ್ರೆ ಆರಂಭವಾಗುವ ಮುನ್ನವೇ ಅಡ್ಡಗೋಡೆಯನ್ನು ತೆರವುಗೊಳಿಸಿ ರಸ್ತೆಯನ್ನು ಸಾರ್ವಜನಿಕರ ಸಂಚಾರಕ್ಕೆ ಮುಕ್ತಗೊಳಿಸಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ. ಅಡ್ಡಗೋಡೆ ತೆರವುಗೊಳಿಸದಿದ್ದರೆ ಗ್ರಾಮಸ್ಥರೆಲ್ಲರೂ ಒಗ್ಗೂಡಿ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ. ಗ್ರಾಮದಲ್ಲಿ ಚರಂಡಿ, ರಸ್ತೆ, ವಿದ್ಯುತ್ ಸೇರಿದಂತೆ ಹಲವು ಮೂಲಭೂತ ಸೌಕರ್ಯಗಳ ಸಮಸ್ಯೆಗಳಿವೆ. ಇಂತಹ ಸಮಸ್ಯೆಗಳಿಗೆ ಆದ್ಯತೆ ನೀಡಿ ಪರಿಹಾರ ಕಲ್ಪಿಸುವತ್ತ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಗಮನಹರಿಸಬೇಕು. ಕಳಪೆ ಕಾಮಗಾರಿ ನಡೆಸಿ ಸರ್ಕಾರಿ ಹಣವನ್ನು ದುರುಪಯೋಗಪಡಿಸಿಕೊಂಡು ಬಿಲ್ ಎತ್ತುವಂತಾಗಬಾರದು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

10 ಲಕ್ಷ ವೆಚ್ಚದಲ್ಲಿ ನಡೆಯುತ್ತಿರುವ ಕಾಮಗಾರಿಗೆ ಬಳಸಲಾಗುತ್ತಿರುವ ಹಣ ಭಕ್ತರಿಂದ ಸಂಗ್ರಹಿಸಿದ ಹಣವೇ ಅಥವಾ ಲ್ಯಾಂಡ್ ಆರ್ಮಿ ಇಲಾಖೆಯ ಅನುದಾನವೇ ಎಂಬುದನ್ನು ಶಾಸಕರು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಸಾರ್ವಜನಿಕರಿಗೆ ಸ್ಪಷ್ಟಪಡಿಸಬೇಕು. ಕಾಮಗಾರಿಯ ಅಂದಾಜು, ಅನುದಾನದ ಮೂಲ, ಅನುಮೋದನೆ ಹಾಗೂ ಗುಣಮಟ್ಟದ ಕುರಿತು ಪಾರದರ್ಶಕವಾಗಿ ಮಾಹಿತಿ ನೀಡಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ. ಈ ಸಂದರ್ಭದಲ್ಲಿ ಮಾಜಿ ಗ್ರಾಮ ಪಂಚಾಯಿತಿ ಸದಸ್ಯ ಕರಿಯಪ್ಪ, ಚನ್ನಗೌಡ ಊಟಿ, ಸ್ವಾಮಿನಾಥ, ಯಲ್ಲಪ್ಪ, ಶಿವಣ್ಣ, ದುರ್ಗಪ್ಪ, ಗುಂಡಪ್ಪ, ಶಿವರಾಜ, ಹನುಮಂತ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ನೇಮಕಾತಿ ಪ್ರಕಟಣೆ

**HPCL ನೇಮಕಾತಿ 2026–24 ಸಲಹೆಗಾರ (Consultant) ಹುದ್ದೆಗಳಿಗೆ ಅರ್ಜಿ ಸಲ್ಲಿಸಿ ಆಗಸ್ಟ್ 31, 2026**

**HPCL ನೇಮಕಾತಿ 2026: 24 ಸಲಹೆಗಾರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (HPCL) ತನ್ನ ಆಗಸ್ಟ್ 2026ರ ಅಧಿಕೃತ ಅಧಿಸೂಚನೆಯ ಮೂಲಕ ಸಲಹೆಗಾರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ವಿಶಾಖಪಟ್ಟಣಂ (ಆಂಧ್ರಪ್ರದೇಶ) ನಲ್ಲಿ ಉದ್ಯೋಗವನ್ನು ಹುಡುಕುತ್ತಿರುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 12–ಸೆಪ್ಟೆಂಬರ್–2026 ರೊಳಗೆ ಅಥವಾ ಅಂದು ಇ–ಮೇಲ್ ಮೂಲಕ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: hindustanpetroleum.com**

## ವರುಣ ವಿಧಾನಸಭಾ ಕ್ಷೇತ್ರ ನಂಜನಗೂಡು ವಿಧಾನಸಭಾ ಕ್ಷೇತ್ರದ ಸಾವಿರಾರು ಕಾಂಗ್ರೆಸ್ ಕಾರ್ಯಕರ್ತರಿಂದ ಶ್ರೀಕಂಠೇಶ್ವರ ಸ್ವಾಮೀಜಿ ಪೂಜೆ ಸಲ್ಲಿಸಿ ಸಿಹಿ ವಿತರಿಸಿ ಸಂಸದ ಸುನಿಲ್ ಬೋಸ್ ಹುಟ್ಟುಹಬ್ಬ ಆಚರಣೆ

❑ ನೈಜ್ಯ ದೆಸೆ ನ್ಯೂಸ್

**ತಾಂಡವಪುರ: ಮೈಸೂರು ಜಿಲ್ಲೆವರುಣ ವಿಧಾನಸಭಾ ಕ್ಷೇತ್ರ ನಂಜನಗೂಡು ವಿಧಾನಸಭಾ ಕ್ಷೇತ್ರದ ಸಾವಿರಾರು ಕಾಂಗ್ರೆಸ್ ಕಾರ್ಯಕರ್ತ–ರಿಂದ ಶ್ರೀಕಂಠೇಶ್ವರ ಸ್ವಾಮೀಜಿ ಪೂಜೆ ಸಲ್ಲಿಸಿ ಸಿಹಿ ವಿತರಿಸಿ ಸಂಸದ ಸುನಿಲ್ ಬೋಸ್ ಹುಟ್ಟುಹಬ್ಬವನ್ನು ಆಚರಿಸಲಾಯಿತು.**

ಸಂಸದ ಸುನಿಲ್ ಬೋಸ್ ಹುಟ್ಟುಹಬ್ಬದ ಪ್ರಯುಕ್ತ ವರುಣ ವಿಧಾನಸಭಾ ಕ್ಷೇತ್ರದ ತಗಡೂರು ಬ್ಲಾಕ್ ನಂಜನಗೂಡು ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರು ಡಾಕ್ಟರ್ ಎಸ್ ಯತೀಂದ್ರ ಸಿದ್ರಾಮಯ್ಯ ಅಭಿಮಾನಿ ಬಳಗದ ಹಾಗೂ ಡಾಕ್ಟರ್ ಇಚ್ಚಿಸಿ ಮಹದೇವಪ್ಪ ಅವರ ಅಭಿಮಾನಿ ಬಳಗ ವತಿಯಿಂದ ದಕ್ಷಿಣ ಕಾಶಿ ನಂಜನಗೂಡಿನ ಶ್ರೀಕಂಠೇಶ್ವರ ಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜ್ಯ ಸಲ್ಲಿಸಿ ಸಿಹಿ ಹಂಚಿ ಬಹಳ ವಿಜೃಂಭಣೆಯಿಂದ ಸುನಿಲ್ ಬೋಸ್ ರವರ ಹುಟ್ಟು ಹಬ್ಬವನ್ನು ಆಚರಿಸಿದರು ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ರಾಜ್ಯ ಮೃಗಾಲಯ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಂಗಸ್ವಾಮಿ ರವರು ಶ್ರೀಕಂಠೇಶ್ವರ ಸ್ವಾಮಿ ದೇವಾಲಯದ ವ್ಯವಸ್ಥಾಪನಾ ಸಮಿತಿಯ ಮಾಜಿ ಅಧ್ಯಕ್ಷ ಹೆಜ್ಜಿಗೆ ಆರ್ ಇಂದನ್ ಬಾಬು ರವರು ಹಾಗೂ ದೇವಾಲಯದ ವ್ಯವಸ್ಥಾಪನೆ ಸಮಿತಿಯ



ಅಧ್ಯಕ್ಷರಾದ ಚಿನ್ನದ ಗುಡಿಹುಂಡಿ ಬಸವೇಗೌಡ ರವರು ತಾಲೂಕು ಕುರುಬ ಸಮಾಜದ ಮುಖಂಡ ಕೆಂಪಣ್ಣನವರು ಮಾತನಾಡಿ ಚಾಮರಾಜನಗರ ಲೋಕಸಭಾ ಸದಸ್ಯ ಸುನಿಲ್ ಬೋಸ್ ರವರ ಪ್ರಯುಕ್ತ ಶ್ರೀಕಂಠೇಶ್ವರ ಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ ಪ್ರಾರ್ಥನೆ ಸಲ್ಲಿಸಿದ್ದೇವೆ ದೇವರು ಅವ–ರಿಗೆ ಆಯಸ್ಸು ಆರೋಗ್ಯ ರಾಜಕೀಯದಲ್ಲಿ ಇನ್ನು ಉನ್ನತ ಸ್ಥಾನಕ್ಕೆ ಹೋಗುವ ಶಕ್ತಿಯನ್ನು ದೇವರು ಅವರ ಕುಟುಂಬಕ್ಕೆ ಕರುಣಿಸಲಿ ಎಂದು ಬೇಡಿಕೊಂಡಿದ್ದೇವೆ ಎಂದರು

ಈ ಸಂದರ್ಭದಲ್ಲಿ ರಾಜ್ಯ ಮೃಗಾಲಯ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಂಗಸ್ವಾಮಿ ಶ್ರೀಕಂಠೇಶ್ವರ ಸ್ವಾಮಿ ದೇವಾಲಯದ ವ್ಯವಸ್ಥಾಪನ ಸಮಿತಿಯ ಮಾಜಿ ಅಧ್ಯಕ್ಷ ಹೆಜ್ಜಿಗೆ ಆರ್ ಇಂದನ್ ಬಾಬು ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರಾದ ಕೆ ಬಿ ಸ್ವಾಮಿ ಚಾಮರಾಜು ಚೋಳರಾಜು ಸಮಿತಿಯ ಮಾಜಿ ಸದಸ್ಯ ಗಿರೀಶ್ ಡಾಕ್ಟರ್ ಎಸ್ ಯತೀಂದ್ರ ಸಿದ್ದರಾಮಯ್ಯನವರ ಅಭಿಮಾನಿ ಬಳಗದ ಗೌರವಾಧ್ಯಕ್ಷ ಸಿ ಆರ್ ಮಹದೇವ್ ಅಧ್ಯಕ್ಷ ಬಿಳುಗಲಿ ಕುಮಾರ ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಜಿ ಮರಳ್ಳಿ ಜಗದೀಶ್ವರ್ ಬಗರ್ ಹುಕುಂ ಸಮಿತಿಯ ಸದಸ್ಯ ರಾಜಣ್ಣ ಆರೋಪುರ ಶಿವಣ್ಣ ಡಾಕ್ಟರ್ ಬಿ ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮದ ಮಾಜಿ ನಿರ್ದೇಶಕ ಹುಳಿಮಾವು ನಟರಾಜು ನಾಗರಾಜು ಬುಕ್ಕ ಹಳ್ಳಿ ಸೋಮಸಂದರ್ ಶ್ರೀಕಂಠ ನಾಯಕ ಮೂಡಳ್ಳಿ ಮಹದೇವಸ್ವಾಮಿ ಸುತ್ತೂರು ಸೋಮಣ್ಣ ಸುರೇಶ್ ಬಾಬು ಶ್ರೀಕಂಠೇಶ್ವರ ದೇವಾಲಯದ ವ್ಯವಸ್ಥಾಪಕ ಸಮಿತಿಯ ಅಧ್ಯಕ್ಷರಾದ ಚಿನ್ನದ ಗುಡಿಹುಂಡಿ ಬಸವೇಗೌಡ ಕುಳ್ಳಯ್ಯ ಓಲೆ ನಾಗರಾಜು ಮಾದೇವಸ್ವಾಮಿ ಹಾಲುಮತ ಮಹಾಸಭಾ ಕುಮಾರ್ ಗೌಡ ಹೆಜ್ಜಿಗೆ ಪುಟ್ಟಣ್ಣ ಗುತ್ತಿಗೆದಾರ ರವಿಕುಮಾರ್ ಗೋಪಾಲಕೃಷ್ಣ ರಮೇಶ ತೊರೆಮಾವು ಟಿಡಿ ಗಿರೀಶ್ ಕೆಎಸ್ ಹುಂಡಿ ಮಹಾದೇವ ಶಿವನಂಜು ಗುರುಪಾದ ಸ್ವಾಮಿ ತಗಡೂರು ಗಾರ್ಡನ್ ಮಹೇಶ್ ನಗರಲ್ಲೇ ಶ್ರೀನಿವಾಸ್ ಮೂರ್ತಿ ಮನು ಗ್ಯಾರಂಟಿ ಯೋಜನೆಯ ಸಮಿತಿ ಸದಸ್ಯ ಕೆ ಎಸ್ ಉಂಡಿ ರವಿ ಪುಟ್ಟಸ್ವಾಮಿ ಮರಳೂರು ದೊರೆಸ್ವಾಮಿ ಅಲಗಂಚಿ ಚಿನ್ನಸ್ವಾಮಿ ಮಹೇಶ್ ಮರಳೂರು ಗಿರೀಶ್ ಮೋಹನ್ ನಾರಾಯಣ್ ಇನ್ನು ಅನೇಕ ವರುಣ ಹಾಗೂ ನಂಜನಗೂಡು ವಿಧಾನಸಭಾ ಕ್ಷೇತ್ರದ ಸಾವಿರಾರು ಕಾರ್ಯಕರ್ತರು ಈ ಹುಟ್ಟು ಹಬ್ಬದ ಕಾರ್ಯಕ್ರಮದಲ್ಲಿ ಭಾಗಿಯಾಗಿ ದೇವರಿಗೆ ಪೂಜಿಸಲಿಸಿ ಸಂಸದರಿಗೆ ಶುಭ ಹಾರೈಸಿದರು

## ಅದ್ದಪ್ಪ ಭೀರಲಿಂಗೇಶ್ವರ ಗಂಗೆಸ್ಥಳ ಮೆರವಣಿಗೆ

❑ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ಪಟ್ಟಣದಲ್ಲಿ ಹಾಲುಮತ ಸಮಾಜದ ಕಂಪ್ಲಿ ನಗರ ಘಟಕದಿಂದ ಅದ್ದಪ್ಪ ಭೀರಲಿಂಗೇಶ್ವರ ಗಂಗೆಸ್ಥಳ ಮೆರವಣಿಗೆ ಶ್ರಾವಣ ಮಾಸದ ಪ್ರಯುಕ್ತ ವಿಜೃಂಭಣೆಯಿಂದ ಜರುಗಿತು. ಇಲ್ಲಿನ ಕಂಪ್ಲಿ–ಕೋಟೆಯ ತುಂಗಭದ್ರಾ ನದಿಯಲ್ಲಿ ಗಂಗೆಪೂಜೆ ಸಲ್ಲಿಸಿದ ನಂತರ ವೆಂಕಟರಮಣ ದೇವಸ್ಥಾನದಿಂದ ಆರಂಭಗೊಂಡ ಭವ್ಯ ಗಂಗೆಸ್ಥಳ ಮೆರವಣಿಗೆ ನಡುವಲ ಮಸೀದ,**




ಅಂಬೇಡ್ಕರ್ ವೃತ್ತ, ಅದ್ದಪ್ಪ ದೇವಸ್ಥಾನ, ಸರ್ಕಾರಿ ಆಸ್ಪತ್ರೆ, ಸಣಾಪುರ ರಸ್ತೆ ಮೂಲಕ ಅದ್ದಪ್ಪ ಭೀರಲಿಂಗೇಶ್ವರ ದೇವಸ್ಥಾನ ಬಳಿ ಸಂಪನ್ನಗೊಂಡಿತು. ಈ ಮೆರವಣಿಗೆಯಲ್ಲಿ ಮಹಿಳೆಯರ ಕುಂಭ, ಕಳಸ, ಡೊಳ್ಳು ಕುಣಿತ ಸೇರಿದಂತೆ ವಾದ್ಯಗಳೊಂದಿಗೆ ಮೆರವಣಿಗೆ ನಡೆಯಿತು. ಅದ್ದಪ್ಪ ಭೀರಲಿಂಗೇಶ್ವರ ದೇವಸ್ಥಾನದಲ್ಲಿ ಹೂವಿನ ಅಲಂಕಾರ, ಅಭಿಷೇಕ, ಮಹಾಮಂಗಳಾರತಿ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಶ್ರದ್ಧೆಯಿಂದ ಜರುಗಿದವು. ಹಾಲುಮತ ಸಮಾಜದವರು ಸೇರಿದಂತೆ ಭಕ್ತರು ದೇವಸ್ಥಾನಕ್ಕೆ ಆಗಮಿಸಿ, ಕಾಯಿ, ಕರ್ಪೂರ ಅರ್ಪಿಸಿ, ದೇವರ ಕೃಪೆಗೆ ಪಾತ್ರರಾದರು. ಈ ಸಂದರ್ಭದಲ್ಲಿ ಹಾಲುಮತ ಸಮಾಜದ ನಗರ ಘಟಕ ಅಧ್ಯಕ್ಷ ಕೆ.ವಸಂತಕುಮಾರ, ಉಪಾಧ್ಯಕ್ಷ ಕುರಿ ಸಿದ್ದಪ್ಪ, ಖಜಾಂಚಿ ಶೇಖರಪ್ಪ ಬಳ್ಳಾರಿ, ಮುಖಂಡರಾದ ಕುರಿ ಹುಸೇನಪ್ಪ, ಕೆ.ಯಮನೂರಪ್ಪ, ಮರಿ ಬಿಂಗಿ ವಿರುಪಣ್ಣ, ಬಿಂಗಿ ವೆಂಕಟೇಶ, ಕೇದರ್‌ನಾಥ, ವಿರುಪಣ್ಣ ಪಕ್ಕೀರಪ್ಪ, ಬಿ.ದೇವೇಂದ್ರ, ಪೆದ್ದಣ್ಣ, ಬಳ್ಳಾರಿ ಲಕ್ಷ್ಮಣ ಸೇರಿದಂತೆ ಸಮಾಜದವರು ಪಾಲ್ಗೊಂಡಿದ್ದರು.

## ಮುಧೋಳದಲ್ಲಿ ರಾಘವೇಂದ್ರ ಸ್ವಾಮಿಗಳ ಪೂರ್ವಾರಾಧನೆ: ಭಕ್ತಿಭಾವದಿಂದ ವಿಶೇಷ ಪೂಜೆ

❑ ನೈಜ್ಯ ದೆಸೆ ನ್ಯೂಸ್

**ಮುಧೋಳ: ನಗರದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ರಾಘವೇಂದ್ರ ಸ್ವಾಮಿಗಳ ಪೂರ್ವಾರಾಧನೆ ಅಂಗವಾಗಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಭಕ್ತಿಭಾವದಿಂದ ಜರುಗಿದವು. ಕಲಿಯುಗದ ಕಾಮಧೇನು, ಕಲ್ಪವೃಕ್ಷವೆಂದೇ ಭಕ್ತರಿಂದ ಪೂಜಿಸಲ್ಪಡುವ ಶ್ರೀ ರಾಘವೇಂದ್ರ ಸ್ವಾಮಿಗಳ ಪೂರ್ವಾರಾಧನೆಯ ಅಂಗವಾಗಿ ಧಾರ್ಮಿಕ ವಿಧಿವಿಧಾನಗಳನ್ನು ನೆರವೇರಿಸಲಾಯಿತು.**



ಧರ್ಮಧ್ವಜಾರೋಹಣದೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದ್ದು, ಮಠದಲ್ಲಿ ವಿಶೇಷ ಪೂಜೆ, ಅಭಿಷೇಕ ಸೇರಿದಂತೆ ವಿವಿಧ ಧಾರ್ಮಿಕ ಸೇವೆಗಳು ನಡೆದವು. ಈ ಸಂದರ್ಭದಲ್ಲಿ ಶ್ರೀ ರಾಯರ ಸನ್ನಿಧಿಯಲ್ಲಿ ಭಕ್ತರು ವಿಶೇಷ ಪೂಜೆ ಸಲ್ಲಿಸಿ, ಮಂತ್ರಘೋಷ ಹಾಗೂ ಭಜನೆಗಳ ಮೂಲಕ ಭಕ್ತಿಯನ್ನು ಸಮರ್ಪಿಸಿದರು. ಮಠದ ಆವರಣದಲ್ಲಿ ಧಾರ್ಮಿಕ ವಾತಾವರಣ ನಿರ್ಮಾಣವಾಗಿದ್ದು, ನೂರಾರು ಭಕ್ತರು ಪಾಲ್ಗೊಂಡು ಶ್ರೀ ರಾಯರ ದರ್ಶನ ಪಡೆದು ಪುನೀತರಾದರು. ಕಾರ್ಯಕ್ರಮದಲ್ಲಿ ವಿವಿಧ ಮಠಗಳ ಸ್ವಾಮೀಜಿಗಳು, ಅರ್ಚಕರು, ಧಾರ್ಮಿಕ ಮುಖಂಡರು ಹಾಗೂ ಭಕ್ತರು ಉಪಸ್ಥಿತರಿದ್ದರು. ಪೂಜಾ ಕಾರ್ಯಕ್ರಮದ ಬಳಿಕ ಭಕ್ತರಿಗೆ ಪ್ರಸಾದ ವಿತರಿಸಲಾಯಿತು.

# ದೇವದುರ್ಗ ತಾಲೂಕಿನಲ್ಲಿ 12 ಪಶು ಆಸ್ಪತ್ರೆಗಳು; ಕೇವಲ ಇಬ್ಬರು ವೈದ್ಯರು!

### ಜಾಲಹಳ್ಳಿ ಪಶು ಆಸ್ಪತ್ರೆಯಲ್ಲಿ ವೈದ್ಯರಿಗಾಗಿ ರೈತರ ಪರದಾಟ ಮಧ್ಯಾಹ್ನ 1 ಗಂಟೆಯಾದರೂ ವೈದ್ಯರಿಲ್ಲ; ಒಬ್ಬ ವೈದ್ಯರಿಗೆ ಆರು ಆಸ್ಪತ್ರೆಗಳ ಜವಾಬ್ದಾರಿ

❑ ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ: ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನಲ್ಲಿ ಒಟ್ಟು 12 ಪಶು ಆಸ್ಪತ್ರೆಗಳಿದ್ದು, ಅವುಗಳ ನಿರ್ವಹಣೆಗೆ ಕೇವಲ ಇಬ್ಬರು ವೈದ್ಯರು ಮಾತ್ರ ಕಾರ್ಯನಿರ್ವಹಿಸುತ್ತಿರುವುದರಿಂದ ಪಶು ಚಿಕಿತ್ಸಾ ಸೇವೆಯಲ್ಲಿ ತೀವ್ರ ಸಮಸ್ಯೆ ಎದುರಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ವೈದ್ಯರ ಕೊರತೆಯಿಂದ ಒಬ್ಬ ವೈದ್ಯರಿಗೆ ಆರು ಆಸ್ಪತ್ರೆಗಳ ಜವಾಬ್ದಾರಿ ವಹಿಸಲಾಗಿದ್ದು, ಇದರಿಂದ ಗ್ರಾಮೀಣ ಭಾಗದ ರೈತ–ರಿಗೆ ಸಮಯಕ್ಕೆ ಸರಿಯಾಗಿ ಪಶು ವೈದ್ಯಕೀಯ ಸೇವೆ ದೊರೆಯುತ್ತಿಲ್ಲ ಎಂಬ ಆರೋಪ ಕೇಳಿಬಂದಿದೆ.**

ಜಾಲಹಳ್ಳಿ ಪಟ್ಟಣದಲ್ಲಿರುವ ಸರ್ಕಾರಿ ಪಶು ಆಸ್ಪತ್ರೆಯಲ್ಲಿ ಸೋಮವಾರ ಮಧ್ಯಾಹ್ನ ಸುಮಾರು 1 ಗಂಟೆಯಾದರೂ ವೈದ್ಯರು ಲಭ್ಯವಿರದ ಹಿನ್ನೆಲೆಯಲ್ಲಿ ಜಾನುವಾರುಗಳಿಗೆ ಚಿಕಿತ್ಸೆ ಕೊಡಿಸಲು ದೂರದ ಗ್ರಾಮಗಳಿಂದ ಆಗಮಿಸಿದ್ದ ರೈತರು ವೈದ್ಯರಿಗಾಗಿ ಗಂಟೆಗಟ್ಟಲೆ ಕಾದು ಕುಳಿತು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಆಸ್ಪತ್ರೆ ಇದ್ದರೂ ವೈದ್ಯರು ಹಾಗೂ ಸಿಬ್ಬಂದಿ ಸಮಯಕ್ಕೆ ಸರಿಯಾಗಿ ಲಭ್ಯವಿರದಿದ್ದರೆ ಸರ್ಕಾರಿ ಪಶು ಆಸ್ಪತ್ರೆಯ ಸೇವೆ ರೈತರಿಗೆ ಸಮರ್ಪಕವಾಗಿ ದೊರೆಯುವುದಿಲ್ಲ. ವಿಶೇಷವಾಗಿ ಜಾನುವಾರುಗಳಿಗೆ ತುರ್ತು ಚಿಕಿತ್ಸೆ ಅಗತ್ಯವಿರುವ ಸಂದರ್ಭಗಳಲ್ಲಿ ವೈದ್ಯರು ಸಿಗದಿದ್ದರೆ ರೈತರು ಅನಿವಾರ್ಯವಾಗಿ ಖಾಸಗಿ ಪಶು ವೈದ್ಯರನ್ನು ಅವಲಂಬಿಸಬೇಕಾಗುತ್ತದೆ. ಇದರಿಂದ ಆರ್ಥಿಕವಾಗಿ ಸಂಕಷ್ಟದಲ್ಲಿರುವ ರೈತ–ರಿಗೆ ಮತ್ತಷ್ಟು ಹೊರೆಯಾಗಲಿದೆ ಎಂದು ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.



### ಉಪನಿರ್ದೇಶಕರ ಹೇಳಿಕೆ

**ರಾಯಚೂರು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಉಪನಿರ್ದೇಶಕ ಓಂ ಸಿಂಗ್ ನಾಯಕ್ ಅವರು ಮಾತನಾಡಿ, ದೇವದುರ್ಗ ತಾಲೂಕಿನ 12 ಪಶು ಆಸ್ಪತ್ರೆಗಳಿಗೆ ಪ್ರಸ್ತುತ ಕೇವಲ ಇಬ್ಬರು ವೈದ್ಯರು ಮಾತ್ರ ಇದ್ದು, ವೈದ್ಯರ ಕೊರತೆಯಿಂದ ಒಬ್ಬ ವೈದ್ಯರಿಗೆ ಆರು ಆಸ್ಪತ್ರೆಗಳ ಜವಾಬ್ದಾರಿ ನೀಡಲಾಗಿದೆ. ಖಾಯಂ ವೈದ್ಯರ ನೇಮಕಾತಿಯಾಗುವವರೆಗೆ ಈ ಸಮಸ್ಯೆ ಮುಂದುವರಿಯುವ ಸಾಧ್ಯತೆ ಇದೆ ಎಂದು ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಜಾಲಹಳ್ಳಿ ಪಶು ಆಸ್ಪತ್ರೆಯಲ್ಲಿ ವೈದ್ಯರು ನಿಗದಿತ ಸಮಯಕ್ಕೆ ಕರ್ತವ್ಯಕ್ಕೆ ಹಾಜರಾಗುವಂತೆ ನೋಡಿಕೊಳ್ಳುವುದರ ಜೊತೆಗೆ, ತಾಲೂಕಿಗೆ ಅಗತ್ಯ ಸಂಖ್ಯೆಯಲ್ಲಿ ಖಾಯಂ ಪಶು ವೈದ್ಯರು ಹಾಗೂ ಸಿಬ್ಬಂದಿಯನ್ನು ನೇಮಕ ಮಾಡಬೇಕು ಎಂದು ರೈತರು ಆಗ್ರಹಿಸಿದ್ದಾರೆ.**

ದೇವದುರ್ಗ ತಾಲೂಕಿನಲ್ಲಿ ಪಶು ಆಸ್ಪತ್ರೆಗಳ ಸಂಖ್ಯೆ ಹೆಚ್ಚಿದ್ದರೂ, ಅಗತ್ಯವಿರುವಷ್ಟು ಖಾಯಂ ವೈದ್ಯರು ಹಾಗೂ ಸಿಬ್ಬಂದಿ ಇಲ್ಲದಿರುವುದು ಪ್ರಮುಖ ಸಮಸ್ಯೆಯಾಗಿದೆ. ಪ್ರಸ್ತುತ ಇಬ್ಬರು ವೈದ್ಯರು ಕಾರ್ಯನಿರ್ವಹಿಸುತ್ತಿದ್ದು, ಅವರಲ್ಲಿ ಒಬ್ಬರು ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿದ್ದಾರೆ. ಇಬ್ಬರು ವೈದ್ಯರಿಗೂ ತಲಾ ಆರು ಆಸ್ಪತ್ರೆಗಳ ಜವಾಬ್ದಾರಿ ನೀಡಲಾಗಿದೆ. ಖಾಯಂ ಸಿಬ್ಬಂದಿಗಳ ಕೊರತೆಯಿಂದ ಆಸ್ಪತ್ರೆಗಳ ನಿರ್ವಹಣೆಯಲ್ಲಿ ತೊಂದರೆ ಉಂಟಾಗುತ್ತಿದ್ದು, ಸಹಾಯಕರು ಹಾಗೂ ಗುತ್ತಿಗೆ ಆಧಾರದ ಸಿಬ್ಬಂದಿಗಳ ಮೂಲಕ ಸೇವೆ ನಿರ್ವಹಿಸಲಾಗುತ್ತಿದೆ. ಜಾಲಹಳ್ಳಿ ವಿಭಾಗದ ವ್ಯಾಪ್ತಿಯಲ್ಲಿ ಸುಮಾರು 20 ಗ್ರಾಮಗಳು ಬರುವುದರಿಂದ ಸಿಬ್ಬಂದಿ ಕೊರತೆಯ ನಡುವೆ ಕಾರ್ಯನಿರ್ವಹಿಸುವುದು ಕಷ್ಟಕರವಾಗಿದ್ದು, ಹಲವು ಸಮಸ್ಯೆಗಳು ಎದುರಾಗುತ್ತಿವೆ ಎಂದು ದೇವದುರ್ಗ ಪಶು ಆಸ್ಪತ್ರೆಯ ಸಹಾಯಕ ನಿರ್ದೇಶಕ ಬಸವರಾಜ ಮಿರಾಜ್ದಾರ್ ತಿಳಿಸಿದ್ದಾರೆ.

### ಲಿಂಗಣ್ಣ ನಾಯಕ್ ಮಕಾಸಿ ಆಕ್ರೋಶ

**ಸಾಮಾಜಿಕ ಕಾರ್ಯಕರ್ತ ಲಿಂಗಣ್ಣ ನಾಯಕ್ ಮಕಾಸಿ ಅವರು ಮಾತನಾಡಿ, ಶಾಸಕರಾದ ಕರೆಮ್ಮ ಜಿ. ನಾಯಕ ಅವರು ತಾಲೂಕಿನ ಆಸ್ಪತ್ರೆಗಳು ಹಾಗೂ ಮೂಲಸೌಕರ್ಯಗಳ ಬಗ್ಗೆ ಸಂಪೂರ್ಣ ನಿರ್ಲಕ್ಷ್ಯ ವಹಿಸಿರುವುದೇ ಇಂತಹ ಸಮಸ್ಯೆಗಳಿಗೆ ಕಾರಣ ಎಂದು ಆಕ್ರೋಶ ವ್ಯಕ್ತಪಡಿಸಿದರು. ತಾಲೂಕು ಹಾಗೂ ಜಿಲ್ಲಾ ಮಟ್ಟದ ಪಶುಪಾಲನಾ ಅಧಿಕಾ–ರಿಗಳು ಜಾಲಹಳ್ಳಿ ಪಶು ಆಸ್ಪತ್ರೆಯ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ, ರೈತರಿಗೆ ನಿರಂತರ ವೈದ್ಯಕೀಯ ಸೇವೆ ದೊರೆಯುವಂತೆ ಕೂಡಲೇ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.**

**ಪಶು ಆಸ್ಪತ್ರೆ ಸಮಸ್ಯೆ ಬಗೆಹರಿಸಲು ಶಾಸಕರಿಗೆ ಒತ್ತಾಯ**

ತಾಲೂಕಿನ ಪಶು ಆಸ್ಪತ್ರೆಗಳ ಸಮಸ್ಯೆ ಗಂಭೀರವಾಗಿದ್ದು, ಮಾನ್ಯ ಶಾಸಕಿ ಕರೆಮ್ಮ ಜಿ. ನಾಯಕ ಅವರು ಕೂಡಲೇ ಸಂಬಂಧಪಟ್ಟ ಸಚಿವರೊಂದಿಗೆ ಚರ್ಚಿಸಿ, ಜಾಲಹಳ್ಳಿ ಸೇರಿದಂತೆ ದೇವದುರ್ಗ ತಾಲೂಕಿನ ಪಶು ಆಸ್ಪತ್ರೆಗಳ ಸುಧಾರಣೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಊರಿನ ಪ್ರಗತಿಪರರಾದ ಬುಡ್ಡಪ್ಪ ಕವಲಿ ಒತ್ತಾಯಿಸಿದರು. ವೈದ್ಯರು ಹಾಗೂ ಖಾಯಂ ಸಿಬ್ಬಂದಿ ಕೊರತೆಯಿಂದ ರೈತರು ಮತ್ತು ಜಾನುವಾರುಗಳು ತೊಂದರೆ ಅನುಭವಿಸುವಂತಾಗಿದ್ದು, ಸರ್ಕಾರ ಕೂಡಲೇ ಅಗತ್ಯ ವೈದ್ಯರು ಮತ್ತು ಸಿಬ್ಬಂದಿಯನ್ನು ನೇಮಕ ಮಾಡಿ ಪಶು ಆಸ್ಪತ್ರೆಗಳಿಗೆ ಸಮರ್ಪಕ ಮೂಲಸೌಕರ್ಯ ಕಲ್ಪಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

## ವಿರಿಂಚಿ ಆರ್ಟ್ ಗ್ಯಾಲರಿಯಲ್ಲಿ ಕಲಾವಿದ ಪ್ರಕಾಶ್ ಆನೆಗುಂದಿ ಅವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ನಗರದ ಆದರ್ಶ ಕಾಲೋನಿಯಲ್ಲಿರುವ ವಿರಿಂಚಿ ಆರ್ಟ್ ಗ್ಯಾಲರಿಯಲ್ಲಿ ರಾಯಚೂರಿನ ಶಕ್ತಿನಗರದ ಚಿತ್ರ ಕಲಾವಿದ ಪ್ರಕಾಶ್ ಆನೆಗುಂದಿ ಅವರ ಕ್ರಿಮ್ಸನ್ 5 ಶೀರ್ಷಿಕೆಯ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನವನ್ನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಧನ ಸಹಾಯದೊಂದಿಗೆ ಏರ್ಪಡಿಸಲಾಯಿತು.**

ಕಾರ್ಯಕ್ರಮ ಉದ್ಘಾಟನೆ ಮಾಡಿ ಮಾತನಾಡಿದ ನೂತನ ತುರ್ವಿಹಾಳ ಪಟ್ಟಣ ಪಂಚಾಯತಿ ಅಧ್ಯಕ್ಷ ಶರಣಪ್ಪ ಹೊಸಗೌಡ್ರು, ಚಿತ್ರಕಲೆ ಎನ್ನುವುದು ಪ್ರಕೃತಿಯ ಜೊತೆಗಿರುವ ಆತ್ಮೀಯ ಸಂಬಂಧ ಪ್ರಕೃತಿಯೊಂದಿಗೆ ಮಾತನಾಡುವ ಅದೃಷ್ಟ ಕಲಾವಿದರು ಮಾತ್ರ ಪಡೆದಿರುತ್ತಾರೆ. ಪ್ರದರ್ಶನಗೊಂಡ ಪ್ರತಿಯೊಂದು ಕಲಾಕೃತಿಯು ತನಗೆ ತನ್ನದೆಯಾದ ಸಂದೇಶವನ್ನು ಹೊಂದಿದೆ ಎಂದು ಹೇಳಿದರು.



ಅತಿಥಿಗಳಾಗಿ ಆಗಮಿಸಿದ ಉಪನ್ಯಾಸಕರಾದ ಗೋವಿಂದರಾಜ ಬಾರಿಕೇರ್ ಮಾತನಾಡಿ, ಒಬ್ಬ ಚಿತ್ರ ಕಲಾವಿದನಿಗೆ ಸೃಷ್ಟಿ ಎಲ್ಲಾ ಸಂಗತಿಯ ಅರಿವು ಬೇಕು ಜೊತೆಗೆ ಸಮಾಜದ ಅರಿವು ಬೇಕು, ಸಮಾಜ ಅಂದ್ರೆ ಅದರೊಳಗೆ ಹೊಕ್ಕು ಸಹಾನುಭವ, ಪರಾನುಭಾವ, ಮಾರ್ಗದಿಂದ ಅದರ ಎಲ್ಲಾ ಸತ್ವುಗಳನ್ನು ಹಿರಿ ತನ್ನ ಕಲೆಯ ಮೂಲಕ ಪ್ರದರ್ಶಿಸುವ ವ್ಯಕ್ತಿಯಾದರೆ ಮಾತ್ರ ಕಲೆ ಸಾಥ–ಕವಾಗುತ್ತದೆ ಎಂದು ಅಭಿಪ್ರಾಯ ಪಟ್ಟರು.

ಗ್ಯಾಲರಿ ಮುಖ್ಯಸ್ಥರಾದ ಶಿವಾನಂದ ಸಾತಿಹಾಳ ಮಾತನಾಡಿ, ಚಿತ್ರಕಲೆ ಸಂಬಂಧಿಸಿದಂತೆ ಯಾವುದೇ ಚಟುವಟಿಕೆ ಒಂದು ಗ್ಯಾಲರಿಯಲ್ಲಿ ಮಾಡಿ ಪ್ರತಿಯೊಬ್ಬ ಕಲಾವಿದರು ನಿರಂತರ ಪ್ರಯತ್ನ ಅಭ್ಯಾಸದೊಂದಿಗೆ ಹೊಸತನವನ್ನು ಹುಟ್ಟು ಹಾಕಬಹುದು ಈಗಿನ ಪ್ರಸ್ತುತ ಘಟನೆಗಳನ್ನು ಆಲಿಸಿ, ನಿಮ್ಮ ಕೃತಿಗಳಲ್ಲಿ ಬಿಂಬಿಸಿ ಎಂದು ಸಲಹೆ ನೀಡಿದರು.

ಕಲಾಕೃತಿ: ಹಂಪಿಯ ವೈಭವವನ್ನು ಸಾರಿ ಹೇಳುವ ಐತಿಹಾಸಿಕ ಸ್ಥಳಗಳನ್ನು ಜಲ ವರ್ಣದಲ್ಲಿ ಕಲಾವಿದ ಸೆರೆಹಿಡಿದಿರುವ ಕಲಾವಿದನಶೈಲಿ ನೋಡುಗರನ್ನು ಮತ್ತಷ್ಟು ಆಕರ್ಷಿಸಿದವು, ಕಲಾವಿದ ಪ್ರಕಾಶ್ ಅವರು ಕಲಾಕೃತಿಯ ರಚನೆಯ ಸಮಯದ ಆ ಸ್ಥಳದಲ್ಲಿ ಆದ ಅನುಭವಗಳನ್ನು ವಿವರಿಸಿದರು. ಮಲ್ಲಪ್ಪ ಕೆಂಪರಡ್ಡಿ, ನಾರಾಯಣಪ್ಪ ಮಾಡಸಿರವಾರ, ಕಲಾವಿದರಾದ ಉಮೇಶ್ ಪತ್ತಾರ್, ಮಹಮದ್ ಉಸ್ಮಾನ್ ಅಲಿ, ಮಹೇಂದ್ರ, ರಮೇಶ, ರಾಜಸಾಬ್ ಸುರೇಶ್, ಅಂಬಣ್ಣ ಸೇರಿದಂತೆ ಕಲಾಭಿಮಾನಿಗಳು ಇದ್ದರು.

# ನೇತ್ರದಾನ: ಮರಣಾನಂತರವೂ ಮತ್ತೊಬ್ಬರ ಬದುಕಿಗೆ ಬೆಳಕು ನೀಡಿ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಜಿಲ್ಲಾ ಆಡಳಿತ ಜಿಲ್ಲಾ ಪಂಚಾಯತ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಸರಕಾರಿ ಪದವಿ ಪೂರ್ವ ಕಾಲೇಜು ಜವಳಗೇರಾದಲ್ಲಿ. ನೇತ್ರದಾನ ಪಾಕ್ಷಿಕ ದಿನಾಚರಣೆ ಕುರಿತು ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸುವ ಕಾರ್ಯಕ್ರಮ ಪದವಿ ಪೂರ್ವ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಯಿತು.**

ಕಾರ್ಯಕ್ರಮದಲ್ಲಿ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ ಅವರು ಮಾತನಾಡಿದರು ಮನುಷ್ಯನ ಜೀವನದಲ್ಲಿ ಕಣ್ಣುಗಳು ಅಮೂಲ್ಯವಾದ ಅಂಗಗಳಾಗಿವೆ. ಕಣ್ಣುಗಳ ಮೂಲಕವೇ ನಾವು ಈ ಸುಂದರ ಜಗತ್ತನ್ನು ನೋಡುತ್ತೇವೆ. ಆದರೆ ಕಾರ್ನಿಯಾ ಸಂಬಂಧಿತ ಸಮಸ್ಯೆಗಳು, ಗಾಯಗಳು, ಸೋಂಕುಗಳು, ಅಪೌಷ್ಟಿಕತೆ ಹಾಗೂ ಜನ್ಮಜಾತ ಅಸ್ವಸ್ಥತೆಗಳಿಂದ ಅನೇಕರು ದೃಷ್ಟಿಯನ್ನು ಕಳೆದುಕೊಳ್ಳುತ್ತಿದ್ದಾರೆ.



ಇಂತಹ ದೃಷ್ಟಿಹೀನರಿಗೆ ಬೆಳಕಿನ ಬದುಕು ನೀಡುವ ಮಹತ್ತರ ಕಾರ್ಯವೇ ನೇತ್ರದಾನ. ಮರಣದ ನಂತರ 6 ರಿಂದ 8 ಗಂಟೆಗಳೊಳಗೆ ಕಣ್ಣುಗಳನ್ನು ದಾನ ಮಾಡಬಹುದಾಗಿದ್ದು, ಕಸಿ ಮಾಡಲು ಕಾರ್ನಿಯಾವನ್ನು ಮಾತ್ರ ಬಳಸಲಾಗುತ್ತದೆ. ಕಣ್ಣು ತೆಗೆಯುವ ಪ್ರಕ್ರಿಯೆಗೆ ಸುಮಾರು 15 ರಿಂದ 20 ನಿಮಿಷಗಳು ಮಾತ್ರ ಬೇಕಾಗುತ್ತದೆ. ಕನ್ನಡಕ ಧರಿಸುವವರು, ಮಧುಮೇಹಿಗಳು, ಅಧಿಕ ರಕ್ತದೊತ್ತಡ ಹೊಂದಿರುವವರು ಹಾಗೂ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಗೊಳಗಾದವರೂ ಸಹ ನೇತ್ರದಾನ ಮಾಡಬಹುದು. ನೇತ್ರದಾನದಿಂದ ಮುಖ ಅಥ–ವಾ ದೇಹ ವಿರೂಪಗೊಳ್ಳುವುದಿಲ್ಲ. ಎಲ್ಲಾ ಧರ್ಮಗಳೂ ನೇತ್ರದಾನವನ್ನು ಬೆಂಬಲಿಸುತ್ತವೆ. ವ್ಯಕ್ತಿಯು ಮುಂಚಿತವಾಗಿ ಪ್ರತಿಜ್ಞೆ ಮಾಡದಿದ್ದರೂ ಸಹ ಅವರ ಕುಟುಂಬದವರು ಮರಣಾನಂತರ ನೇತ್ರದಾನಕ್ಕೆ ಒಪ್ಪಿಗೆ ನೀಡಬಹುದು. ದಾನಿಯ ಕುಟುಂಬಕ್ಕೆ ನೇತ್ರ ಬ್ಯಾಂಕಿನಿಂದ ಮೆಚ್ಚುಗೆಯ ಪ್ರಮಾಣಪತ್ರ ನೀಡಲಾಗುತ್ತದೆ. ಆದರೆ ಹೆಪಟೈಟಿಸ್, ಏಡ್ಸ್, ರೇಬೀಸ್, ಸೆಪ್ಟಿಸಿಮಿಯಾ, ಲ್ಯುಕೇಮಿಯಾ, ಲಿಂಫೋಮಾ ಹಾಗೂ ಕೊನೆಯ ಹಂತದ ಕ್ಯಾನ್ಸರ್‌ನಂತಹ ಕಾಯಿಲೆಗಳಿಂದ ಬಳಲುತ್ತಿರುವವರು ನೇತ್ರದಾನಕ್ಕೆ ಅರ್ಹರಾಗಿರುವುದಿಲ್ಲ. ಎಂದರು

ಉಪನ್ಯಾಸಕರಾದ ಡಾಕ್ಟರ ನಾರಾಯಣ ಸರ್ ಅವರು ಮಾತನಾಡಿ, "ಮರಣಾನಂತರ ದೇಹವನ್ನು ಸುಡುವ ಅಥವಾ ಹೂಳುವ ಬದಲು ಕಣ್ಣುಗಳನ್ನು ದಾನ ಮಾಡುವ ಮೂಲಕ ಇಬ್ಬರು ದೃಷ್ಟಿಹೀನರಿಗೆ ಹೊಸ ಬೆಳಕು ನೀಡಬಹುದು. ನೇತ್ರದಾನವು ಮಾನವೀಯತೆಯ ಅತ್ಯುನ್ನತ ಸೇವೆಯಾಗಿದೆ. ಪ್ರತಿಯೊಬ್ಬರೂ ತಮ್ಮ ಕುಟುಂಬ ಸದಸ್ಯರೊಂದಿಗೆ ಚರ್ಚಿಸಿ ನೇತ್ರದಾನದ ಪ್ರತಿಜ್ಞೆ ಮಾಡಬೇಕು" ಎಂದು ಕರೆ ನೀಡಿದರು. ಅವರು ವಿದ್ಯಾರ್ಥಿಗಳಿಗೆ ಮನವಿ ಮಾಡುತ್ತಾ, "ನಿಮ್ಮ ಕಣ್ಣುಗಳು ದೇವರು ನೀಡಿರುವ ಅಮೂಲ್ಯ ಉಡ–ಗೊರೆ. ಅವುಗಳನ್ನು ಮರಣಾನಂತರ ಮತ್ತೊಬ್ಬರ ಬದುಕಿಗೆ ಬೆಳಕಾಗುವಂತೆ ನೇತ್ರದಾನ ಮಾಡಿ. ನಿಮ್ಮ ಹತ್ತಿರದ ನೇತ್ರ ಬ್ಯಾಂಕ್ ಅಥವಾ ಆರೋಗ್ಯ ಸಂಸ್ಥೆಯನ್ನು ಸಂಪರ್ಕಿಸಿ ನೇತ್ರದಾನದ ಬಗ್ಗೆ ಮಾಹಿತಿ ಪಡೆದು ಪ್ರತಿಜ್ಞೆ ಮಾಡಿ" ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸರಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಬಸವಲಿಂಗಯ್ಯ ಸ್ವಾಮಿ .ಸರ್ ಉಪನ್ಯಾಸಕರಾದ ಸಾಹೇಣ್ಣ ಸರ್ ಆರೋಗ್ಯ ನಿರೀಕ್ಷಣಾ ಅಧಿಕಾ–ರಿಗಳಾದ ಅಂಬಮ್ಮ ಮತ್ತು ಕಾಲೇಜಿನ ವಿದ್ಯಾರ್ಥಿ. ವಿದ್ಯಾರ್ಥಿನಿಯರು. ಉಪಸ್ಥಿತರಿದ್ದರು .

## ವಚನ ದರ್ಶನ

ಲೋಕದ ಡೊಂಕ ನೀವೇಕೆ ತಿದ್ದುವಿರಿ ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ; ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ. ನೆರೆಮನೆಯ ದಃಖಕ್ಕೆ ಅಳುವವರ ಮೆಚ್ಚ ಕೂಡಲಸಂಗಮದೇವ.

"ಲೋಕದ ಡೊಂಕ ನೀವೇಕೆ ತಿದ್ದುವಿರಿ" ಎಂಬುದು 12ನೇ ಶತಮಾನದ ಶ್ರೇಷ್ಠ ಸಮಾಜ ಸುಧಾರಕ ಹಾಗೂ ಶಿವಶರಣ ಬಸವಣ್ಣನವರ ಅತ್ಯಂತ ಪ್ರಸಿದ್ಧವಾದ ವಚನವಾಗಿದೆ. ಈ ವಚನವು ಸಮಾಜವನ್ನು ವಿಮರ್ಶಿಸುವ ಮುನ್ನ ಪ್ರತಿಯೊಬ್ಬರೂ ತಮ್ಮನ್ನು ತಾವು ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂಬ ಸಾರ್ವಕಾಲಿಕ ಸತ್ಯವನ್ನು ಬೋಧಿಸುತ್ತದೆ.

ನಾವು ಸಾಮಾನ್ಯವಾಗಿ ನಮ್ಮ ಸುತ್ತಲಿನ ಲೋಕದ ಡೊಂಕುಗಳ ಕಡೆಗೆ ಬೊಟ್ಟುಮಾಡಿ ತೋರಿಸುತ್ತೇವೆಯೇ ಹೊರತು ನಮ್ಮದೇ ಡೊಂಕುಗಳ ಕಡೆಗೆ ನೋಡುವ ಪ್ರಯತ್ನ ಮಾಡುವುದಿಲ್ಲ. ಲೋಕದ ಡೊಂಕುಗಳನ್ನು ಹೆಚ್ಚಿಸುವುದರಲ್ಲಿ ಅಥವಾ ಈಗಿರುವ ಡೊಂಕುಗಳು ಸುಧಾರಣೆಯಾಗದಿರುವುದರಲ್ಲಿ ನಾವೆಷ್ಟು ಪಾಲುದಾರರೆಂಬುದನ್ನು ಕುರಿತು ನಮ್ಮನ್ನು ನಾವು ಪ್ರಶ್ನಿಸಿಕೊಳ್ಳುವುದನ್ನು ಮರೆತೇಬಿಡುತ್ತೇವೆ. ನಮ್ಮನ್ನು ನಾವು ಪ್ರಶ್ನಿಸಿಕೊಂಡಾಗ ಮಾತ್ರ ನಮ್ಮ ಡೊಂಕುಗಳನ್ನು ತಿದ್ದಿಕೊಳ್ಳಲು ಪ್ರಯತ್ನಿಸುತ್ತೇವೆ. ಇಲ್ಲದ ಹೊರತು ಲೋಕದ ಡೊಂಕನ್ನು ತಿದ್ದಲು ಹೊರಡುವುದು ವ್ಯರ್ಥ ಸಾಹಸವಾದೀತು.

ನಮ್ಮ ಡೊಂಕನ್ನು ನಾವೇ ತಿದ್ದಿಕೊಂಡು ತನು ಮನ ಸಂತೈಸಿಕೊಂಡ ಬಳಿಕವಷ್ಟೇ ಲೋಕದ ಡೊಂಕನ್ನು ತಿದ್ದಲು ಸಮರ್ಥರಾಗುತ್ತೇವೆ. ಈ ಲೋಕದಲ್ಲಿ ಸದಾಕಾಲವೂ ಡೊಂಕುಗಳು (ದೋಷಗಳು) ಸೇರ್ಪಡೆಯಾಗುತ್ತಲೇ ಹೋಗುತ್ತವೆ. ಇಂತಹ ಡೊಂಕುಗಳನ್ನು ಸರಿಪಡಿಸುವ ಮೂಲಕವೇ ಲೋಕವನ್ನು ಉತ್ತಮಗೊಳಿಸಬೇಕಾದ ಜವಾಬ್ದಾರಿಯನ್ನು ನಾವೆಲ್ಲರೂ ನಿರ್ವಹಿಸಬೇಕಾಗುತ್ತದೆ. ಸಾಧ್ಯವಾದಷ್ಟು ಮಟ್ಟಿಗೆ ಈ ಸಮಾಜಕ್ಕೆ ನಾವು ವೈಯಕ್ತಿಕವಾಗಿ ಯಾವುದೇ ಡೊಂಕುಗಳನ್ನು ಸೇರಿಸದಂತೆ ಎಚ್ಚರವಹಿಸಬೇಕು.

ನೆರೆಯವರ ದುಃಖಕ್ಕೆ ನಮ್ಮದೇ ಡೊಂಕು ಕಾರಣವಾಗಿರಬಹುದು ಅಥವಾ ನಮ್ಮಂತಹ ಕೆಲವರ ಡೊಂಕಿನಿಂದ ಉಂಟಾದದ್ದೂ ಇರಬಹುದು. ಆದುದರಿಂದ ಮೊದಲು ನಾವು ನಮ್ಮ ಡೊಂಕನ್ನು ಸರಿಪಡಿಸಿಕೊಂಡು ಸಮಾಜದ ಡೊಂಕನ್ನು ತಿದ್ದುವ ನೈತಿಕತೆ ಪಡೆದುಕೊಳ್ಳುವುದು ಒಳ್ಳೆಯದೆಂಬುದು ಬಸವಣ್ಣನವರ ಆಶಯ.

"ಪರಚಿಂತೆ ಎಮಗೇಕಯ್ಯ.
ನಮ್ಮ ಚಿಂತೆ ಎಮಗೆ ಸಾಲದೆ?" ಎಂಬ ವಚನವಾಕ್ಯದಲ್ಲಿ ಕೂಡಾ ಪರದ ಚಿಂತೆ ಮಾಡುವ ಮೊದಲು ನಾವು ನಮ್ಮ ಬಗ್ಗೆಯೇ ಚಿಂತಿಸಬೇಕೆಂಬ ಅಂತರಾರ್ಥ ವ್ಯಕ್ತವಾಗುತ್ತದೆ. ನಾವು ನಮ್ಮ ತನುವ ಸಂತೈಸಿಕೊಳ್ಳುವ ಹಾಗೂ ಮನವ ಸಂತೈಸಿಕೊಳ್ಳುವ ಪ್ರಯತ್ನದಲ್ಲಿ ತನುವಿನ ಡೊಂಕೇನು ಮತ್ತು ಮನದ ಡೊಂಕೇನು ಎಂಬುದನ್ನು ಕಂಡುಕೊಳ್ಳಬೇಕು.

"ತನುವಿನ ಕೋಪ ತನ್ನ ಹಿರಿತನದ ಕೇಡು, ಮನದ ಕೋಪ ತನ್ನ ಅರಿವಿನ ಕೇಡು" ಎಂದಿದ್ದಾರೆ ಬಸವಣ್ಣ. ಎದುರಾಳಿಯ ಮೂರ್ತರೂಪದ ತನುವಿನ ಮೇಲೆ (ದೇಹದ ವಿರುದ್ಧ) ಕೋಪಗೊಂಡು ಅನ್ಯಾಕ್ರಮಣ ನಡೆಸುವುದು ನಮ್ಮ ಹಿರಿತನಕ್ಕೆ ಕುರೂಪವಾಗುತ್ತದೆ. ಮನದಲ್ಲಿ ಹುಟ್ಟುವ ಅಮೂರ್ತವಾದ ಕೋಪ ನಮ್ಮ ಅರಿವಿಗೆ ಕೇಡಾಗಿ ಒದಗುತ್ತದೆ. ಇಂತಹ ಕೋಪ ಪ್ರಜ್ಞಾ ಶೂನ್ಯತೆಗೂ ಕಾರಣಮಾಡಿಕೊಡುತ್ತದೆ.ಶರಣರ ವಚನಗಳು ದಾರಿದೀಪ ಶರಣು ಶರಣಾರ್ಥಿಗಳು.


ಪಂಪಯ್ಯಸ್ವಾಮಿ ಸಾಲಿಮಠ
ಅಂತರಗಂಗಿ-ಸಿಂಧನೂರು. 998094144

# ದರೋಜಿ ಸೊಸೈಟಿಯ ನೂತನ ಅಧ್ಯಕ್ಷರಾಗಿ ಮರಿಸ್ವಾಮಿ ನಾಯಕ ಅವಿರೋಧ ಆಯ್ಕೆ

ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ: ತಾಲೂಕು ಸಮೀಪದ ಹೊಸ ದರೋಜಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಮರಿಸ್ವಾಮಿ ನಾಯಕ, ಉಪಾಧ್ಯಕ್ಷರಾಗಿ ಎನ್.ವಿ.ಹನುಮಂತಪ್ಪ ಅವಿರೋಧವಾಗಿ ಆಯ್ಕೆಗೊಂಡರು.**

ಇಲ್ಲಿನ ಕಚೇರಿಯಲ್ಲಿ ಸೋಮವಾರ ನಡೆದ ಸಹಕಾರ ಸಂಘದ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಿತು. ಚುನಾವಣಾಧಿಕಾರಿ(ಮುಖ್ಯ ಕಾರ್ಯನಿರ್ವಾಹಕ) ವಿ.ಮಲ್ಲಿಕಾರ್ಜುನ ಅವರ ನೇತೃತ್ವದಲ್ಲಿ ಚುನಾವಣೆ ಪ್ರಕ್ರಿಯೆ ನಡೆಯಿತು. ಈ ಚುನಾವಣೆಯಲ್ಲಿ ಎರಡು ಸ್ಥಾನಗಳಿಗೆ ತಲಾ ಒಬ್ಬೊಬ್ಬರು ನಾಮಪತ್ರ ಸಲ್ಲಿಸಿದ ಹಿನ್ನಲೆ ನೂತನ ಅಧ್ಯಕ್ಷರಾಗಿ ಮರಿಸ್ವಾಮಿ ನಾಯಕ,



ಉಪಾಧ್ಯಕ್ಷರಾಗಿ ಎನ್.ವಿ.ಹನುಮಂತಪ್ಪ ಅವಿರೋಧವಾಗಿ ಆಯ್ಕೆಯಾದರು.

ಈ ಚುನಾವಣೆ ಪ್ರಕ್ರಿಯೆಯಲ್ಲಿ ಸಂಘದ ನಿರ್ದೇಶಕರಾದ ಪಿ.ಎಸ್.ಲಿಂಗಪ್ಪ, ವಲಿ ಮಸೀದಿ, ಡಿ.ವಿ.ಮಂಜುನಾಥ, ಕೆ.ರಾಮಾಂಜಿನೇಯ, ವೆಂಕಟೇಶ ಸಾಲುಮನೆ, ಶ್ರೀನಿವಾಸ ಡಿ, ದಾನಪ್ಪ ಹೆಚ್, ತಿಮ್ಮಯ್ಯ ಕೆ, ಶೋಭಾದೇವಿ ಟಿ, ನಾಗಮ್ಮ, ರಮೇಶ(ಬ್ಯಾಂಕ್ ಪ್ರತಿನಿಧಿ) ಇದ್ದರು. ನಂತರ ನೂತನ ಅಧ್ಯಕ್ಷ ಮತ್ತು ಉಪಾಧ್ಯಕ್ಷರಿಗೆ ಮಾಲಾರ್ಪಣೆಯೊಂದಿಗೆ ಗೌರವಿಸಲಾಯಿತು.

ತಾಪಂ ಮಾಜಿ ಉಪಾಧ್ಯಕ್ಷ ಮಾದಾಪುರ ಮಾರೆಪ್ಪ ಮಾತನಾಡಿ, ಇಲ್ಲಿನ ದರೋಜಿ ಸೊಸೈಟಿ ಅಭಿವೃದ್ಧಿಗೊಳಿಸುವ ಜೊತೆಗೆ ಸರ್ಕಾರದ ಸೌಲಭ್ಯಗಳನ್ನು ರೈತರಿಗೆ ಸಕಾಲದಲ್ಲಿ ತಲುಪಿಸುವ ನಿಟ್ಟಿನಲ್ಲಿ ನೂತನ ಅಧ್ಯಕ್ಷ, ಉಪಾಧ್ಯಕ್ಷರು ಸರ್ವ ನಿರ್ದೇಶಕರ ಸಹಕಾರದೊಂದಿಗೆ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು ಎಂದರು. ಈ ಸಂದರ್ಭದಲ್ಲಿ ಜಿಪಂ ಮಾಜಿ ಸದಸ್ಯ ವಿ.ಜನಾರ್ಧನ, ಸಿಬ್ಬಂದಿಗಳಾದ ವಿ.ರ?ರಿಸ್ವಾಮಿ, ಕೆ.ಶಿವಕುಮಾರ, ಕೆ.ರಾಮಾಂಜಿನಿ ಸೇ-ರಿದಂತೆ ಸ್ಥಳೀಯ, ಮುಖಂಡರು, ರೈತರಿದ್ದರು.

# ಸರಕಾರಿ ಆದರ್ಶ ವಿದ್ಯಾಲಯ ಅರಕೇರಾದ ಕಬ್ಬಡಿ ಆಟಗಾರರಿಗೆ ಕ್ರೀಡಾ ಸಮವಸ್ತ್ರ ವಿತರಣೆ

ನೈಜ್ಯ ದೆಸೆ ನ್ಯೂಸ್

**ಅರಕೇರಾ: ಪಟ್ಟಣದಲ್ಲಿನ ಸರಕಾರಿ ಆದ-ರ್ಶ ವಿದ್ಯಾಲಯದ ಬಾಲಕ,ಬಾಲಕಿಂ-ರುರಿಗೆ ಕಬ್ಬಡಿ ಆಟಗಾರರಿಗೆ ಕ್ರೀಡಾ ಸಮವಸ್ತ್ರ ವಿತರಣೆ ಮಾಡಲಾಯಿತು. ಆಟಗಾರರು ಒಂದೇ ರೀತಿಯ ವಸ್ತ್ರ ಧರಿಸುವುದ-ರಿಂದ ಆಟಗಾರರಲ್ಲಿ ಒಗ್ಗಟ್ಟು ಮತ್ತು ತಂಡದ ಹೆಮ್ಮೆ ಹೆಚ್ಚುತ್ತದೆ. ಮತ್ತು ಒತ್ತಡ ಬದುಕಿನ ನಡುವೆ ಮನಸ್ಸು ಮತ್ತು ದೇಹದ ಚೈತನ್ಯಕ್ಕೆ ಕ್ರೀಡೆ ಸಹಕಾ-ರಿಯಾಗಿದೆ,ಪತ್ರಿಯೊಬ್ಬರೂ ಕ್ರೀಡಾ ಮನೋಭಾವ ಬೆಳೆಸಿಕೊಳ್ಳಬೇಕು ಗ್ರಾಮೀಣಾ ಭಾಗದಲ್ಲಿ ಕ್ರೀಡಾಸಕ್ತಿ ಕುಸಿಯುತ್ತಿದ್ದು ಪ್ರೋತ್ಸಾಹಿಸಬೇಕೆಂದು ಎಂದು ಮುಖ್ಯೋಪಾಧ್ಯಾಯ್ಯರಾದ ಶಿವುಪುತ್ರಪ್ಪಹೇಳಿದರು.**

ಅವರು ಅರಕೇರಾ ಪಟ್ಟಣದಲ್ಲಿನ ಸರಕಾರಿ ಆದರ್ಶ ವಿದ್ಯಾಲಯದಲ್ಲಿನ ಮಕ್ಕಳು ಕಬ್ಬಡಿ ತಂಡದಲ್ಲಿ ಉತ್ತಮ ತರಬೇತಿ ಹೊಂದಿದ್ದಾರೆ.ಕ್ರೀಡಾ ಕೂಟದಲ್ಲಿ ಭಾಗವಹಿಸುವ ಬಾಲಕ ,ಬಾಲಕಿಯರಿಗೆ ಕ್ರೀಡಾ ಸಮವಸ್ತ್ರ ನೀಡಿ ಕ್ರೀಡಾ ಕೂಟಕ್ಕೆ ಸ್ಪೂರ್ತಿ ಪ್ರೋತ್ಸಾಹ ನೀಡುವದು ಅಗತ್ಯವಾಗಿದೆ. ಇಂದು ನಮ್ಮ ಕಬ್ಬಡಿ ಆಟಗಾರರಿಗೆ ಕೊಡುಗೆಯ ದಾನಿಗಳಾದ ವೆಂಕಟೇಶಪೂಜಾರಿ ಬುದ್ದಿನ್ನಿ,ಅಮರೇಶ ಎಸ್ ಡಿ ಎಂಸಿ ಉಪಾಧ್ಯಕ್ಷರು ಇವರು ಕ್ರೀಡಾ ಸಮವಸ್ತ್ರ ನೀಡಿ ಕ್ರೀಡಾಪಟುಗಳ ಪ್ರೋತ್ಸಾಹಕ್ಕೆ ಮುಂದಾಗಿರುವುದು ಸ್ಲಾಘನೀಯ ಕಾರ್ಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಂದರ್ಭದಲ್ಲಿ ಎಸ್ ಡಿ ಎಂಸಿ ಅಧ್ಯಕ್ಷರಾದ ತಿಮ್ಮಣ್ಣನಾಯಕ ಜಲ್ಲೆ. ಮಾನಶಯ್ಯಪೂಜಾರಿ ,ವೆಂಕಟೇಶಪೂಜಾರಿ, ಅಮರೇಶ ಎಸ್ ಡಿ ಎಂ.ಸಿ ಉಪಾಧ್ಯಕ್ಷರು,




ರಾಜುನಾಯಕ,ಸರಕಾರಿ ಆದರ್ಶವಿದ್ಯಾಲಯದ ಮುಖ್ಯೋಪಾಧ್ಯಾಯ್ಯರಾದ ಶಿವಪುತ್ರಪ್ಪ ಸಹಶಿಕ್ಷಕರಾದ ಚನ್ನಮಲ್ಲಪ್ಪ,ರೇಣುಕಾಮೇಡಂ, ಚಿತ್ರಕಲಾ ಶಿಕ್ಷಕರಾದ ಸಿದ್ದಪ್ಪನಾಯಕ,ಅತಿಥಿ ಶಿಕ್ಷಕರಾದ ಮುದಕಪ್ಪನಾಯಕದೈಹಿಕ ಶಿಕ್ಷಕರು, ಬುಡ್ಡಣ್ಣ, ಹನುಮಂತ್ರಾಯ ನಾಯಕ ಗುಜುಪು ಸೇರಿದಂತೆ ಕಬ್ಬಡಿ ತಂಡದ ಕ್ರೀಡಾಪಟುಗಳು ಉಪಸ್ಥಿತರಿದ್ದರು.

# ಸಿಂಧನೂರಿನಲ್ಲಿ GIO ವತಿಯಿಂದ "Embracing Femininity ಸ್ತ್ರೀತ್ವವನ್ನು ಅಪ್ಪಿಕೊಳ್ಳುವುದು" ಅಭಿಯಾನ ಯಶಸ್ವಿ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ನಗರದ ಮಸೀದಿ-ಎ-ಹುದಾ ಮಸೀದಿಯಲ್ಲಿ ಭಾನುವಾರ ಆಗಸ್ಟ್ 30 ರಂದು ಹೆಣ್ಣುಮಕ್ಕಳು ಮತ್ತು ಮಹಿಳೆಯರು ತಮ್ಮ ಗುರುತು, ಗೌರವ, ಘನತೆ ಹಾಗೂ ಸಮಾಜದಲ್ಲಿನ ತಮ್ಮ ಪಾತ್ರವನ್ನು ಇಸ್ಲಾಮಿನ ದೃಷ್ಟಿಕೋನದಿಂದ ಅರ್ಥಮಾಡಿಕೊಳ್ಳುವಂತೆ ಮಾಡುವ ಉದ್ದೇಶದಿಂದ, GIO (Girls Islamic Organisation), ಸಿಂಧನೂರು ವತಿಯಿಂದ ಹಮ್ಮಿಕೊಳ್ಳಲಾಗಿದ್ದ " Embracing Femininity ಸ್ತ್ರೀತ್ವವನ್ನು ಅಪ್ಪಿಕೊಳ್ಳುವುದು" ಅಭಿಯಾನವು ಯಶಸ್ವಿಯಾಗಿ ಪೂರ್ಣಗೊಂಡಿತು.**

ಅಭಿಯಾನದ ಆರಂಭವನ್ನು GIO ಸ್ಥಾಪನಾ ದಿನ, ಉದ್ಘಾಟನಾ ಕಾರ್ಯಕ್ರಮ, ಉಪಘಟಕಗಳ ಉದ್ಘಾಟನೆ ಹಾಗೂ ಲೋಗೋ ಬಿಡುಗಡೆ ಮೂಲಕ ಮಾಡಲಾಯಿತು. ನಂತರ ವಿಶೇಷ ಸಾಪ್ತಾಹಿಕ ಕಾರ್ಯಕ್ರಮಗಳು, ಜಾಗೃತಿ ಕಾರ್ಯಕ್ರಮಗಳು, ಶಾಲಾ-ಕಾಲೇಜು ಭೇಟಿ, ಗಣ್ಯರ ಭೇಟಿ ಹಾಗೂ ವಿವಿಧ ಪ್ರದೇಶಗಳಲ್ಲಿ ಭೇಟಿ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು. 497 ವಿದ್ಯಾರ್ಥಿಗಳಿಗೆ ಅಭಿಯಾನದ ಸಂದೇಶ ಅಭಿಯಾನದ ಸಂದರ್ಭದಲ್ಲಿ 7 ಶಾಲೆಗಳು, 2 ಕಾಲೇಜುಗಳು ಹಾಗೂ 3 ಮದರಸಾಗಳಿಗೆ ಭೇಟಿ ನೀಡಿ* ಒಟ್ಟು 497 ವಿದ್ಯಾರ್ಥಿಗಳನ್ನು ತಲುಪಲಾಯಿತು. ಅಭಿಯಾನದ ಸಮಾರೋಪ ಕಾರ್ಯಕ್ರಮದಲ್ಲಿ 450ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.

GIO ಕಾರ್ಯಕರ್ತರಿಗಾಗಿ ಆಯೋಜಿಸಲಾದ ವಿವಿಧ ಸ್ಪರ್ಧೆಗಳಲ್ಲಿ 51 ಕಾರ್ಯಕರ್ತರು ಭಾಗವಹಿಸಿದ್ದರು. "ಇಸ್ಲಾಂನಲ್ಲಿ ಮಹಿಳೆಯರ ಸ್ಥಾನಮಾನ"




ಎಂಬ ವಿಷಯದ ಕುರಿತು ಪ್ರಬಂಧ ಸ್ಪರ್ಧೆಯನ್ನೂ ಆಯೋಜಿಸಲಾಗಿತ್ತು. ಅದೇ ರೀತಿ "ತಝ್ಕೀರ್-ಎ-ಸಹಾಬಿಯಾತ್" ಎಂಬ ಆರು ದಿನಗಳ ಆನ್‌ಲೈನ್ ಸರಣಿಯ ಮೂಲಕ ಸಹಾಬಿಯಾತ್ ಅವರ ಜೀವನ ಮತ್ತು ಆದರ್ಶಗಳನ್ನು ಪರಿಚಯಿಸಲಾಯಿತು. ಸಮಾರೋಪ ಸಮಾರಂಭ ಹಾಗೂ ಪ್ರತಿಭಾ ಉತ್ಸವ ಅಭಿಯಾನದ* ಸಮಾರೋಪವನ್ನು " Talent Fiesta 2026" ಪ್ರತಿಭಾ ಉತ್ಸವದೊಂದಿಗೆ ಮಸೀದಿ-ಎ-ಹುದಾದಲ್ಲಿ ನಡೆಸಲಾಯಿತು.* ಈ ಸಂದರ್ಭದಲ್ಲಿ ಅಭಿಯಾನದ ಸಂಪೂರ್ಣ ವರದಿಯನ್ನು GIO ಸಿಂಧನೂರು ಸ್ಥಾನೀಯ ಅಧ್ಯಕ್ಷೆ ನೆಹಾ ಸಮ್ರೀನ್ ಅವರು PPT ಮೂಲಕ ಮಂಡಿಸಿದರು.

ಕಾರ್ಯಕ್ರಮದಲ್ಲಿ ಕುರಾನ್ ಪಠಣ, ಅಭಿಯಾನದ ಪರಿಚಯ, ಅಭಿನಯದ ಹಾಡು, ಸಮಾರೋಪ ಭಾಷಣ, ಬಹುಮಾನ ವಿತರಣೆ ಹಾಗೂ Talent Fiesta ಸೇ-ರಿದಂತೆ ವಿವಿಧ ಕಾರ್ಯಕ್ರಮಗಳು ನಡೆದವು. ಮಹಿಳೆಯರ ಘನತೆ ಮತ್ತು ಆತ್ಮವಿಶ್ವಾಸಕ್ಕೆ ಒತ್ತು ಕಾರ್ಯಕ್ರಮದ ಸಮಾರೋಪ ಭಾಷಣವನ್ನು ಜಮಾಅತೆ ಇಸ್ಲಾಮಿ ಹಿಂದ್ ಕರ್ನಾಟಕ ಕಾರ್ಯದರ್ಶಿ ಮೊಹಮ್ಮದ್ ತಕ್ಷೀಲಾ ಖಾನಂ ಸಾಹಿಬಾ ಅವರು ನೀಡಿದರು. ಮಹಿಳೆಯಾಗಿರುವುದು ದೌರ್ಬಲ್ಯವಲ್ಲ; ಅದು ಅಲ್ಲಾಹನು ನೀಡಿರುವ ವಿಶೇಷ ಅನುಗ್ರಹ ಮತ್ತು ಗುರುತಾಗಿದೆ. ಮಹಿಳೆಯರು ತಮ್ಮ ಸ್ತ್ರೀತ್ವವನ್ನು ಘನತೆ, ಆತ್ಮವಿಶ್ವಾಸ ಹಾಗೂ ಕೃತಜ್ಞತೆಯಿಂದ ಸ್ವೀಕರಿಸಬೇಕು ಎಂದು ಅವರು ಹೇಳಿದರು.

ಬಲಿಷ್ಠ ಕುಟುಂಬ ಹಾಗೂ ಉತ್ತಮ ಸಮಾಜ ನಿರ್ಮಾಣದಲ್ಲಿ ಮಹಿಳೆಯರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಹೆಣ್ಣುಮಕ್ಕಳು ತಮ್ಮ ಮೌಲ್ಯವನ್ನು ಅರಿತುಕೊಂಡು, ತಮ್ಮ ಘನತೆಯನ್ನು ಕಾಪಾಡಿಕೊಂಡು, ವಿವೇಕಯುತ ಹಾಗೂ ಜವಾಬ್ದಾರಿಯುತ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು ಎಂದು ಅವರು ಕರೆ ನೀಡಿದರು. ಪ್ರತಿಭಾ ಉತ್ಸವದಲ್ಲಿ ಪ್ರತಿಭಾ ಅನಾವರಣ ಉಖಔ ವತಿಯಿಂದ ಆಯೋಜಿಸಲಾದ Talent Fiesta 2026ರಲ್ಲಿ GIO ಕಾರ್ಯಕರ್ತೆಯರು ವಿವಿಧ ಮಾದರಿ ಪ್ರಸ್ತುತಿಗಳ ಮೂಲಕ ತಮ್ಮ ಸೃಜನಶೀಲತೆ ಮತ್ತು ಪ್ರತಿಭೆಯನ್ನು ಅನಾವರಣಗೊಳಿಸಿದರು.

" Celebrating Her Talent & Her Identity" ಎಂಬ ಆಶಯದೊಂದಿಗೆ ನಡೆದ ಈ ಕಾರ್ಯಕ್ರಮವು ಹೆಣ್ಣುಮಕ್ಕಳ ಪ್ರತಿಭೆ, ಸೃಜನಶೀಲತೆ ಹಾಗೂ ಸ್ವಂತ ಗುರುತನ್ನು ಗೌರವಿಸುವ ವೇದಿಕೆಯಾಯಿತು. ಅಭಿಯಾನದ ಯಶಸ್ಸಿನಲ್ಲಿ ಉಖಔ ತಂಡದ ಪ್ರಮುಖ ಪಾತ್ರ ಈ ಸಂಪೂರ್ಣ ಅಭಿಯಾನವನ್ನು ಯಶಸ್ವಿಗೊಳಿಸುವಲ್ಲಿ GIO ಸಿಂಧನೂರು ಸ್ಥಾನೀಯ ಅಧ್ಯಕ್ಷೆ ನೆಹಾ ಸಮ್ರೀನ್ ಅವರ ನೇತೃತ್ವ, ಯೋಜನೆ ಹಾಗೂ ಮಾರ್ಗದರ್ಶನದ ಜೊತೆಗೆ GIOಯ ಎಲ್ಲಾ ಸದಸ್ಯೆಯರು ಮತ್ತು ಕಾರ್ಯಕರ್ತೆಯರ ಸತತ ಪರಿಶ್ರಮ, ಸಮಯ ಹಾಗೂ ಸಹಕಾರ ಪ್ರಮುಖ ಪಾತ್ರ ವಹಿಸಿತು.

ಶಾಲಾ-ಕಾಲೇಜು ಭೇಟಿ, ಜಾಗೃತಿ ಕಾರ್ಯಕ್ರಮಗಳು, ಆನ್‌ಲೈನ್ ಸರಣಿ, ವಿವಿಧ ಸ್ಪರ್ಧೆಗಳು ಹಾಗೂ ಸಮಾರೋಪ ಕಾರ್ಯಕ್ರಮ ಸೇರಿದಂತೆ ಅಭಿಯಾನದ ಪ್ರತಿಯೊಂದು ಚಟುವಟಿಕೆಯನ್ನು ವ್ಯವಸ್ಥಿತವಾಗಿ ನಡೆಸುವಲ್ಲಿ GIO ತಂಡವು ಶ್ರಮಿಸಿತು. ಒಟ್ಟಾರೆಯಾಗಿ, "ಸ್ತ್ರೀತ್ವವು ದೌರ್ಬಲ್ಯವಲ್ಲ; ಅದು ಅಲ್ಲಾಹನು ನೀಡಿರುವ ಗೌರವಯುತ ಗುರುತು ಮತ್ತು ಅನುಗ್ರಹವಾಗಿದೆ" ಎಂಬ ಸಂದೇಶವನ್ನು ಸಮಾಜಕ್ಕೆ ತಲುಪಿಸುವಲ್ಲಿ ಅಭಿಯಾನ ಯಶಸ್ವಿಯಾಯಿತು. 450ಕ್ಕೂ ಹೆಚ್ಚು ಜನರ ಭಾಗವಹಿಸುವಿಕೆಯೊಂದಿಗೆ ನಡೆದ ಸಮಾರೋಪ ಕಾರ್ಯಕ್ರಮವು ಯಶಸ್ವಿಯಾಗಿ ಪೂರ್ಣಗೊಂಡಿದ್ದು, GIO ಸಿಂಧನೂರು ಸ್ಥಾನೀಯ ಅಧ್ಯಕ್ಷೆ ನೆಹಾ ಸಮ್ರೀನ್ ಅವರ ನೇತೃತ್ವದಲ್ಲಿ GIO ಸದಸ್ಯೆಯರು ಹಾಗೂ ಕಾರ್ಯಕರ್ತೆಯರ ಒಗ್ಗಟ್ಟಿನ ಪರಿಶ್ರಮ ಮತ್ತು ಸಹಕಾರದಿಂದ ಸಂಪೂರ್ಣ ಅಭಿಯಾನವು ಯಶಸ್ವಿಯಾಗಿ ಮುಕ್ತಾಯಗೊಂಡಿತು.

## ಶ್ರದ್ಧಾಭಕ್ತಿಯಿಂದ ಕಾಳಿಕಾ ಕಮ್ಮಟೇಶ್ವರ ದೇವರ ಗಂಗೆಸ್ಥಳ ಉತ್ಸವ ಮೆರವಣಿಗೆ

ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ: ಪಟ್ಟಣದಲ್ಲಿ ವಿಶ್ವಕರ್ಮ ಸಮಾಜದಿಂದ ಶುಕ್ರವಾರದಂದು ಶ್ರೀ ಕಾಳಿಕಾ ಕಮ್ಮಟೇಶ್ವರ ದೇವರ ಗಂಗೆಸ್ಥಳ,ಉತ್ಸವ ಮೆರವಣಿಗೆ ಶ್ರದ್ಧಾಭಕ್ತಿ ಜರುಗಿತು.**



ಇಲ್ಲಿನ ಪ್ರಮುಖ ರಸ್ತೆಗಳಲ್ಲಿ ನಡೆದ ಭವ್ಯ ಮೆರವಣಿಗೆ ನಡೆಯಿತು. ನಂತರ ಭಕ್ತರೆಲ್ಲರಿಗೂ ತೀಥ-ರ್ಥ ಪ್ರಸಾದವನ್ನು ವಿತರಿಸಲಾಯಿತು ಸಂಜೆ ಕಾಳಿಕಾ ಕಮಟೇಶ್ವರ ದೇವರ ಉಯ್ಯಾಲೆ ಪೂಜೆ ಶಾಸ್ತ್ರೋಕ್ತವಾಗಿ ನೆರವೇರಿತು. ಕಾರ್ಯಕ್ರಮದಲ್ಲಿ ಅಧ್ಯಕ್ಷ ಡಿ.ರುದ್ರಪ್ಪ ಪ್ರಾಚಾರ್ಯ ಕಾರ್ಯದರ್ಶಿ ಡಿ.ಮೌನೇಶ್, ಮುಖಂಡರಾದ ಕಾಳಚಾರಿ, ನಾರಾಯಣಚಾರ್, ಮೌನೇಶ್,ರಾಘು,ಮಲ್ಲಿ,ಚಂದ್ರಶೇಖರ ಆಚಾರ್,ರಾಘವೇಂದ್ರ,ಷಣ್ಮುಖ ಆಚಾರ್, ರಾಮಚಂದ್ರ ಆಚಾರ್, ಮಹಿಳಾ ಅಧ್ಯಕ್ಷೆ ರಾಧಾ, ಡಿ.ವೀಣಾ, ವಿಜಯಲಕ್ಷ್ಮಿ, ಪೂಜಾ ಸೇರಿದಂತೆ ಸಮಾಜದವರು ಪಾಲ್ಗೊಂಡಿದ್ದರು.

# ಕನ್ನಾಳ ಪಾಟೀಲ್ ಕುಟುಂಬದಿಂದ ಕಾರುಣ್ಯಾಶ್ರಮದಲ್ಲಿ " ಕರುಣಾಮಯಿ ಸಂಸ್ಕಾರ"ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಮಸ್ಕಿ ತಾಲೂಕಿನ ಕನ್ನಾಳ ಪಾಟೀಲ್ ಕುಟುಂಬದ ಡಾ. ಶರಣಬಸವರಾಜ.ಎಸ್. ಪಾಟೀಲ್ ನಿವೃತ್ತ ಉಪ ನಿರ್ದೇಶಕರು ಪಶು ಸಂಗೋಪನ ಇಲಾಖೆ ರಾಯಚೂರು ಇವರ ಮಾತಾ ಪಿತೃಗಳಾದ ದಿ.ನೀಲಮ್ಮ ಪಾಟೀಲ್ ಹಾಗೂ ದಿ. ಶರಣಗೌಡ ಪಾಟೀಲ್ ಇವರುಗಳ ಪುಣ್ಯರಾಧನೆ ಕಾರ್ಯಕ್ರಮವನ್ನು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ)ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ " ಕರುಣಾಮಯಿ ಸಂಸ್ಕಾರ" ಎನ್ನುವ ವಿಶೇಷ ಕಾರ್ಯಕ್ರಮದಡಿಯಲ್ಲಿ ಆಶ್ರಮದಲ್ಲಿ ಇಡೀ ದಿನ ವಿವಿಧ ಬಗೆಯ ಮಹಾಪ್ರಸಾದ ಸೇವೆ ಹಣ್ಣು ಹಂಪಲುಗಳನ್ನು ವಿತರಿಸುವ ಮೂಲಕ ಅರ್ಥಪೂರ್ಣವಾಗಿ ಕಾರ್ಯಕ್ರಮ ನೆರವೇರಿತು.**

ಈ ಕಾರ್ಯಕ್ರಮದಲ್ಲಿ ದಿ.ನೀಲಮ್ಮ ಪಾಟೀಲ್ ಹಾಗೂ ದಿ. ಶರಣಗೌಡ ಪಾಟೀಲ್ ಈ ಆದರ್ಶ ದಂಪತಿಗಳ ಭಾವಚಿತ್ರಗಳಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಈ ಸಮಾರಂಭದಲ್ಲಿ ಪೂರ್ಣಿಮಾ ಡಾ. ಶರಣಬಸವರಾಜ.ಎಸ್.ಪಾಟೀಲ್ ದಂಪತಿಗಳನ್ನು ಆಶ್ರಮದ ವತಿಯಿಂದ ಸನ್ಮಾನಿಸಿ




ಗೌರವಿಸಿ ನೆನಪಿನ ಕಾಣಿಕೆ ವಿತರಿಸಲಾಯಿತು. ನಂತರ ಪಶು ಸಂಗೋಪನಾ ಇಲಾಖೆಯ ನಿವೃತ್ತ ಉಪ ನಿರ್ದೇಶಕರಾದ ಡ. ಶರಣಬಸವರಾಜ್. ಎಸ್. ಪಾಟೀಲ್ ಮಾತನಾಡಿ ನಮ್ಮ ಕಲ್ಯಾಣ ಕರ್ನಾಟಕದಲ್ಲಿ ದಶಕದಿಂದಲೂ ಕೂಡ ಅನಾಥರ ನೊಂದವರ ಸೇವೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸುವ ಈ ಆಶ್ರಮವು ಕರುಣೆಯ ಕುಟುಂಬವಾಗಿದೆ.

ಸಮಾಜದಿಂದ ಹಾಗೂ ಕುಟುಂಬದಿಂದ ತಿರಸ್ಕೃತಗೊಂಡವರಿಗೆ ಬದುಕು ಕಟ್ಟಿ ಕೊಟ್ಟಿರುವ ನಮ್ಮ ಕಾರುಣ್ಯಾಶ್ರಮದಲ್ಲಿರುವ ಎಲ್ಲಾ ಆಶ್ರಯದಾತರುಗಳು ಶರಣ ಸ್ವರೂಪಿಗಳು ಮಾನವ ಧರ್ಮದ ಮಾನವೀಯತೆಯ ಪಾಠಶಾಲೆಯಾಗಿದೆ ನಮ್ಮ ಕಾರುಣ್ಯಾಶ್ರಮವು ಮನುಷ್ಯ ಹುಟ್ಟಿದ ಮೇಲೆ ಜೀವನದಲ್ಲಿ ಏನಾದರೂ ಸಾಧಿಸಬೇಕಾದರೆ ಕಾರುಣ್ಯ ಸಂಸ್ಥೆಯ ಆದರ್ಶಗಳನ್ನು ಇಂದಿನ ಯುವ ಪೀಳಿಗೆ ಮೈಗೂಡಿಸಿಕೊಂಡು ಇಲ್ಲಿರುವ ಎಲ್ಲಾ ಹಿರಿಯ ಜೀವಿಗಳಿಗೆ ಸೇವೆ ಮಾಡಿದರೆ ಸಾಕು ಅದೇ ಬಹುದೊಡ್ಡ ಸಾಧನೆಯಾಗುತ್ತದೆ. ನಾವು ಪ್ರತಿ ವರ್ಷವೂ ಕೂಡ ಬರೀ ನಮ್ಮ ಜನ್ಮದಾತರನ್ನಲ್ಲದೇ ಸಮಾಜದಲ್ಲಿರುವ ಎಲ್ಲಾ ಹಿರಿಯರನ್ನು ಸ್ಮರಿಸುವ ಕಾರ್ಯಕ್ರಮ ನಮ್ಮ ಕುಟುಂಬದಿಂದ ಹಮ್ಮಿಕೊಳ್ಳುತ್ತಿರುವುದು ನಮ್ಮೆಲ್ಲಾ ಕುಟುಂಬದ ಸದಸ್ಯರ ಪ್ರೀತಿಗೆ ಪಾತ್ರವಾಗಿದೆ.

ಆಶ್ರಮಕ್ಕೆ ಮುಂದಿನ ದಿನಮಾನಗಳಲ್ಲಿ ಸ್ವಂತ ಜಾಗದ ವ್ಯವಸ್ಥೆ ಏನಾದರೂ ಆದಲ್ಲಿ ನಾವು ಸಂಪೂರ್ಣ ಸಹಾಯ ಸಹಕಾರ ನೀಡುತ್ತೇವೆ. ಆಶ್ರಮದಲ್ಲಿರುವ ಎಲ್ಲಾ ಶರಣ ಜೀವಿಗಳ ಆಶೀರ್ವಾದ ನಮ್ಮ ಕುಟುಂಬದ ಮೇಲೆ ಮತ್ತು ಈ ಸಂಸ್ಥೆಯನ್ನು ನಿರ್ವಹಣೆ ಮಾಡುವ ಪ್ರತಿಯೊಬ್ಬ ಸಿಬ್ಬಂದಿಗಳ ಮೇಲಿರಲಿ. ಕಡು ಬಡತನದ ಬಡ ಜಂಗಮರಾದ ಹರೇಟನೂರಿನ ಹಿರೇಮಠದ ವೇ. ಮೂ. ಅಮರಯ್ಯ ಸ್ವಾಮಿಯವರು ನೊಂದ ಜೀವಿಗಳ ನಾಡಿಮಿಡಿತವಾಗಿ ಅಂಧ-ಅನಾಥರ ಬಾಳಿಗೆ ಗದುಗಿನ ಲಿಂಗಕ್ಕೆ ಡಾ. ಪಂಡಿತ ಪುಟ್ಟರಾಜ ಗವಾಯಿಗಳಂತೆ ಇಂದು ನಮ್ಮೆಲ್ಲರ ಮುಂದಿದ್ದಾರೆ. ಇವರ ಸೇವೆ ಭಗವಂತನ ಪೂಜೆಗಿಂತ ಮಿಗಿಲಾಗಿದೆ ಎನ್ನುವುದು ನನ್ನ ಭಾವನೆ ಎಂದು ಹಲವಾರು ಅನಿಸಿಕೆಗಳನ್ನು ಹಂಚಿಕೊಂಡು ಆಶ್ರಮದ ಸೇವೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತಪಡಿಸಿದರು.

ನಂತರ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ.ಚನ್ನಬಸವ ಸ್ವಾಮಿ ಹಿರೇಮಠ ಮಾತನಾಡಿ ನಮ್ಮ ಕರುಣೆಯ ಕುಟುಂಬವಾದ ಕನ್ನಾಳ ಗ್ರಾಮದ ಪಾಟೀಲ್ ಕುಟುಂಬದ ಹಿರಿಯರುಗಳಾದ ವೀರನಗೌಡ ಪಾಟೀಲ್. ಗಂಗಮ್ಮ ಪಾಟೀಲ್. ಮಲ್ಲಿಕಾರ್ಜುನ ಪಾಟೀಲ್. ಶರಣಮ್ಮ ಪಾಟೀಲ್. ಶಕುಂತಲಾ ಗಂ.ಡಾ. ಪಂಪನಗೌಡ ಹಿರೇಕಡಬೂರು. ವಿಜಯಲಕ್ಷ್ಮಿ ಗಂ.ಬಸವಲಿಂಗಪ್ಪ ತೋರಣದಿನ್ನಿ. ಮಲ್ಲಮ್ಮ ಗಂ. ಡಾ. ಶರಣೆಗೌಡ ಸಿಂಧನೂರು ಇವರೆಲ್ಲರೂಗಳ ಮಾರ್ಗದರ್ಶನದಂತೆ ಮತ್ತು ನಾಡಿನ ಸಮಸ್ತ ದಾನಿಗಳ ಸಹಾಯ ಸಹಕಾರದೊಂದಿಗೆ ನಾವು ಬದುಕಿ ಬದುಕಿಸುತಿದ್ದೇವೆ. ಈ ಕಾರುಣ್ಯ ಕುಟುಂಬದ ಯಜಮಾನರುಗಳಾಗಿ ದಾನಿಗಳು ನಮ್ಮ ಕಾರುಣ್ಯ ಕುಟುಂಬಕ್ಕೆ ದೇವರಾಗಿದ್ದಾರೆ.

ಸಮಸ್ತ ಕರುಣಾಮಯಿಗಳು ಆಶ್ರಮಕ್ಕೆ ಸ್ವಂತ ಜಾಗ ಕಲ್ಪಿಸಿಕೊಟ್ಟಲ್ಲಿ ಸಮಾಜದಲ್ಲಿರುವ ಇನ್ನೂ ಅನೇಕ ಹಲವಾರು ಅನಾಥರಿಗೆ ಆಶ್ರಯ ನೀಡಬಹುದು ಎಂದು ಮಾತನಾಡಿ ಕನ್ನಾಳ ಗ್ರಾಮದ ಪಾಟೀಲ್ ಕುಟುಂಬಕ್ಕೆ ಧನ್ಯವಾದಗಳು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪೂರ್ಣಿಮಾ ಡಾ.ಶರಣಬಸವರಾಜ. ಎಸ್. ಪಾಟೀಲ್ ಹಾಗೂ ಆಶ್ರಮದ ಸದಸ್ಯರಾದ ಸುಜಾತ ಹಿರೇಮಠ. ಆಶ್ರಮದ ಸಿಬ್ಬಂದಿಗಳಾದ ಸಿದ್ದಯ್ಯ ಸ್ವಾಮಿ. ಮರಿಯಪ್ಪ. ಜ್ಯೋತಿ. ಮಹಾಂತೇಶ ದೋಟಿಹಾಳ. ಬಸವ ಸ್ವಾಮಿ.ಶರಣು ಸ್ವಾಮಿ.ಅನೇಕರು ಉಪಸ್ಥಿತರಿದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101